ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲೂಕು.

ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

ಸೆಪ್ಟೆಂಬರ್ – 2019

10 ನೆಯ ತರಗತಿ ಪ್ರಥಮ ಭಾಷೆ ಕನ್ನಡ

# ಮಾದರಿ ನೀಲನಕಾಶೆ ಮತ್ತು ಪ್ರಶ್ನೆ ಪತ್ರಿಕೆ

ರಚನೆ
ರವೀಶ್ ಕುಮಾರ್ ಬಿ.
ಕನ್ನಡ ಭಾಷಾ ಶಿಕ್ಷಕರು.

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ – 2019

# 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

## ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 4 | 4 |
| 5 | ನೀಲ ನಕಾಶೆ | 5 | 5 |
| 6 | ಪ್ರಶ್ನೆ ಪತ್ರಿಕೆ | 6 | 9 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 10 | 24 |
| 8 | ಪ್ರಶ್ನಾನುಸಾರ ವಿಶ್ಲೇಷಣೆ | 25 | 26 |

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ – 2019

# 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 18 |
| 2 | ಗ್ರಹಿಕೆ | 36 | 36 | 15 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಕಿರು ಉತ್ತರ – 1 | 07 | 07 | 07 |
| 3 | ಕಿರು ಉತ್ತರ – 2 | 20 | 20 | 10 |
| 4 | ದೀರ್ಘ ಉತ್ತರ – 1 | 33 | 33 | 11 |
| 5 | ದೀರ್ಘ ಉತ್ತರ – 2 | 20 | 20 | 05 |
| 6 | ದೀರ್ಘ ಉತ್ತರ – 3 | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 30 | 25 |
| 2 | ಸಾಧಾರಣ | 50 | 50 | 19 |
| 3 | ಕಠಿಣ | 20 | 20 | 05 |
| | **ಒಟ್ಟು** | **100** | **100** | **49** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

### 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಯುದ್ಧ | 07 |
| 2 | ಶಬರಿ | 07 |
| 3 | ಲಂಡನ್ ನಗರ | 07 |
| 4 | ಭಾಗ್ಯಶಿಲ್ಪಿಗಳು | 07 |
| | ಗದ್ಯ ಒಟ್ಟು | 28 |

### 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಸಂಕಲ್ಪಗೀತೆ | 08 |
| 2 | ಹಕ್ಕಿ ಹಾರುತಿದೆ ನೋಡಿದಿರಾ? | 07 |
| 3 | ಹಲಗಲಿಯ ಬೇಡರು | 07 |
| 4 | ಕೌರವೇಂದ್ರನ ಕೊಂದೆ ನೀನು | 08 |
| | ಪದ್ಯ ಒಟ್ಟು | 30 |

### 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು |
|---|---|---|
| 1 | ಸ್ವಾಮಿ ವಿವೇಕಾನಂದರ ಚಿಂತನೆಗಳು | 05 |
| 2 | ವಸಂತ ಮುಖ ತೋರಲಿಲ್ಲ | 04 |
| | ಪದ್ಯ ಒಟ್ಟು | 09 |

### 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು |
|---|---|---|
| 1 | ಅಪಠಿತ ಗದ್ಯ | 04 |

### 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು |
|---|---|---|
| 1 | ವ್ಯಾಕರಣಾಂಶಗಳು | 10 |
| 2 | ಅಲಂಕಾರ | 03 |
| 3 | ಛಂದಸ್ಸು | 03 |
| 4 | ಗಾದೆ ವಿಸ್ತರಣೆ | 03 |
| 5 | ಪತ್ರಲೇಖನ | 05 |
| 6 | ಪ್ರಬಂಧ ಲೇಖನ | 05 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 |

# ಹಂತ : 5(ಎ). ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ – 2019 – 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | ಗ್ರಹಿಕೆ | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ. ಉ. 2 | ವ. ನಿ | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಯುದ್ಧ | ** | 2(1) | ** | ** | 1(2) | ** | ** | ** | 1(3) | ** | ** | ** | ** | 2(1) | 1(2) | 1(3) | ** | ** | 07 | 04 |
| 2 | ಶಬರಿ | ** | ** | ** | ** | 2(2) | ** | ** | ** | 1(3) | ** | ** | ** | ** | ** | 2(2) | 1(3) | ** | ** | 07 | 03 |
| 3 | ಲಂಡನ್ ನಗರ | ** | 1(1) | ** | ** | *** | 1(3) | ** | ** | 1(3) | ** | ** | ** | ** | 1(1) | ** | 2(3) | ** | ** | 07 | 03 |
| 4 | ಭಾಗ್ಯಶಿಲ್ಪಿಗಳು | ** | 1(1) | ** | ** | 1(2) | ** | ** | ** | ** | 1(4) | ** | ** | ** | 1(1) | 1(2) | ** | 1(4) | ** | 07 | 03 |
| | **ಗದ್ಯ ಒಟ್ಟು** | ** | **4(1)** | ** | ** | **4(2)** | **1(3)** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ಸಂಕಲ್ಪಗೀತೆ | ** | 1(1) | ** | ** | *** | ** | ** | ** | 1(3) | *** | ** | 1(4) | ** | 1(1) | *** | 1(3) | 1(4) | ** | 08 | 03 |
| 2 | ಹಕ್ಕಿ ಹಾರುತಿದೆ ನೋಡಿದಿರಾ | ** | 1(1) | ** | ** | ** | ** | 1(3) | ** | 1(3) | ** | ** | ** | ** | 1(1) | ** | 2(3) | *** | ** | 07 | 03 |
| 3 | ಹಲಗಲಿಯ ಬೇಡರು | ** | ** | 1(4) | ** | ** | ** | ** | ** | 1(3) | ** | ** | ** | ** | ** | ** | 1(3) | 1(4) | ** | 07 | 02 |
| 4 | ಕೌರವೇಂದ್ರನ ಕೊಂದೆ ನೀನು | ** | ** | ** | ** | 2(2) | *** | ** | ** | *** | 1(4) | ** | *** | ** | ** | 2(2) | ** | 1(4) | ** | 08 | 03 |
| | **ಪದ್ಯ ಒಟ್ಟು** | ** | **2(1)** | **1(4)** | ** | **2(2)** | **1(3)** | ** | ** | **3(3)** | **1(4)** | ** | **1(4)** | ** | **2(1)** | **2(2)** | **3(3)** | **3(4)** | ** | **30** | **11** |
| 1 | ಸ್ವಾಮಿ ವಿವೇಕಾನಂದರ ಚಿಂತನೆಗಳು | ** | 1(1) | ** | ** | 2(2) | ** | ** | ** | ** | ** | ** | ** | ** | 1(1) | 2(2) | ** | ** | ** | 05 | 03 |
| 2 | ವಸಂತ ಮುಖ ತೋರಲಿಲ್ಲ | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | ** | **1(1)** | ** | ** | **4(2)** | ** | ** | *** | ** | ** | ** | ** | ** | **1(1)** | **4(2)** | ** | ** | ** | **09** | **05** |
| 1 | **ಅಪಠಿತ ಗದ್ಯ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |
| 1 | ಅಲಂಕಾರ | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | *** | ** | ** | 1(3) | ** | | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕರಣಾಂಶಗಳು | **10(1))** | ** | ** | ** | ** | ** | ** | ** | ** | ** | ** | ** | **10(1)** | ** | ** | ** | ** | ** | 10 | 10 |
| | **ಒಟ್ಟು** | **10(1)** | ** | ** | *** | ** | **3(3)** | ** | ** | **1(3)** | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **10(1)** | **7(1)** | **1(4)** | *** | **10(2)** | **4(3)** | **1(4)** | *** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **18 – 21** | | | **15 – 36** | | | | **11 – 39** | | | | **01 – 04** | **45 – 100** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

## ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ – 2019

## 10 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಸಮಯ : 03–00 ಗಂಟೆಗಳು** **ಗರಿಷ್ಠ ಅಂಕಗಳು : 100**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6 * 1 = 6**

1. ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರಸಹಿತ ಪದವಿದು;
   (ಎ) ಉಷ್ಣ (ಬಿ) ಅಸ್ತ್ರ
   (ಸಿ) ಅಕ್ಷರ (ಡಿ) ಯುದ್ಧ
2. ‘ಸದ್ಗುಣ’ ಪದದಲ್ಲಿ ಆಗಿರುವ ಸಂಧಿ;
   (ಎ) ಸವರ್ಣದೀರ್ಘ (ಬಿ) ವೃದ್ಧಿ
   (ಸಿ) ಜಶ್ತ್ವ (ಡಿ) ಗುಣ
3. ಇವುಗಳಲ್ಲಿ ಕನ್ನಡದ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ತೇಜಕೆಡೆ (ಬಿ) ತೇಜಗೆಡೆ
   (ಸಿ) ಸ್ಥೈರ್ಯಕೆಡೆ (ಡಿ) ಸ್ಥೈರ್ಯವಾಂತು
4. ‘ಬರಡಾಗಿರುವೀ ಕಾಡುಮೇಡುಗಳ ವಸಂತವಾಗುತ ಮುಟ್ಟೋಣ. – ಈ ವಾಕ್ಯದಲ್ಲಿರುವ ‘ಮುಟ್ಟೋಣ’ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
   (ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ
   (ಸಿ) ನಿಷೇಧಾರ್ಥಕ (ಡಿ) ಭಾವನಾರ್ಥಕ
5. ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸಬೇಕು;
   (ಎ) ಅಲ್ಪವಿರಾಮ (ಬಿ) ಪೂರ್ಣವಿರಾಮ
   (ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ
6. ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು ಮತ್ತು ‘ಕೈಗಾರಿಕೆ ಇಲ್ಲವೆ ಅವನತಿ” ಎಂಬ ಘೋಷಣೆ ಮಾಡಿದರು. – ಈ ವಾಕ್ಯವು
   (ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ
   (ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 * 1 = 4**

7. ದೃಷ್ಟಿ : ದಿಟ್ಟಿ : : ಪ್ರಸಾದ : ____________________
8. ಇನತನೂಜ : ಕರ್ಣ : : ರಾಜೀವಸಖ : ____________________
9. ಹಾಗೆ : ಸಾಮಾನ್ಯಾರ್ಥಕಾವ್ಯಯ : : ಹೌದು : ____________________
10. ನುಡಿನುಡಿ : ದ್ವಿರುಕ್ತಿ : : ನಾಡುನುಡಿ : ____________________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 * 1 = 7**

11. ಮುದುಕಿಯ ಸೊಸೆಯು ಯಾವ ಬೇನೆಯಿಂದ ನರಳುತ್ತಿದ್ದಳು?
12. ಮುದುಕಿಯ ಮಗನು ಎಲ್ಲಿಗೆ ಹೋಗಿದ್ದನು?
13. ಲಂಡನ್ ನಗರದ ಟ್ರಾಫಲ್ಗಾರ್ ಸ್ಕ್ವೇರ್ ನಲ್ಲಿ ಯಾರ ಮೂರ್ತಿಯಿದೆ?
14. ‘ಪ್ರಜಾಪ್ರತಿನಿಧಿ ಸಭೆ’ಯು ಯಾರ ಕಾಲದಲ್ಲಿ ನೂತನ ರೂಪವನ್ನು ಪಡೆಯಿತು?

15. ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ ಸುತ್ತಲು ಕವಿಯುವ ಕತ್ತಲೆಯೊಳಗೆ ಎಂತಹ ಹಣತೆಯನ್ನು ಹಚ್ಚುವ ಸಂಕಲ್ಪವನ್ನು ಮಾಡಬೇಕು?
16. ದ. ರಾ. ಬೇಂದ್ರೆ ಅವರು ಕಾಲವನ್ನು ಯಾವುದಕ್ಕೆ ಹೋಲಿಸಿದ್ದಾರೆ?
17. ಸ್ವಾಮಿ ವಿವೇಕಾನಂದ ಅವರು ಯಾವ ವರ್ಗದವರು ತಮ್ಮ 'ಊಳಿಗ ಸ್ವಭಾವ'ವನ್ನು ಬಿಟ್ಟು ಹೊರಬರಬೇಕೆಂದು ಕರೆಕೊಡುತ್ತಾರೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 * 2 = 20**

18. ಮುದುಕಿಯು ಎದೆ ಬಡಿದುಕೊಂಡು ರೋದಿಸಲು ಕಾರಣವೇನು?
19. ಶಬರಿಯು ರಾಮನ ಗುಣಗಾನವನ್ನು ಹೇಗೆ ಮಾಡಿದ್ದಾಳೆ?
20. ಶಬರಿಯು ರಾಮ–ಲಕ್ಷ್ಮಣರನ್ನು ಹೇಗೆ ಸತ್ಕರಿಸಿದಳು?
21. ವಿಶ್ವೇಶ್ವರಯ್ಯ ಅವರು ಮೈಸೂರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿಯನ್ನು ಹಾಕಿದರು?
22. ಕರ್ಣನು ತನ್ನ ಮಾತಿಗೆ ಒಪ್ಪಿದರೆ ಓಲಗದಲ್ಲಿ ಹೇಗೆ ಒಪ್ಪುವನೆಂದು ಕೃಷ್ಣನು ಹೇಳುತ್ತಾನೆ?
23. ಕರ್ಣನು "ಕೃಷ್ಣನು ಕೌರವೇಂದ್ರನನ್ನು ಕೊಂದನು" ಎಂದು ಹೇಳಲು ಕಾರಣವೇನು?
24. ಸ್ವಾಮಿ ವಿವೇಕಾನಂದ ಅವರು ಏಕೆ ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು?
25. ಇಂದಿನ ಸನ್ನಿವೇಶದಲ್ಲಿ ಸ್ವಾಮಿ ವಿವೇಕಾನಂದ ಅವರು ಹೆಚ್ಚು ಪ್ರಸ್ತುತರು ಏಕೆ?
26. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
27. 'ವಸಂತ ಯಾರಿಗೆ ಮುಖ ತೋರಲಿಲ್ಲ' ಕವನದಲ್ಲಿ ಪುಟ್ಟಿಯ ಮನೆಯ ವಾತಾವರಣವನ್ನು ಕುರಿತು ಕವಯಿತ್ರಿಯು ಹೇಗೆ ವರ್ಣಿಸಿದ್ದಾರೆ?

**V. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 * 3 = 6**

28. ವಿ. ಕೃ. ಗೋಕಾಕ್
29. ದ. ರಾ. ಬೇಂದ್ರೆ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 * 3 = 3**

30. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1 * 3 = 3**

31. ಲಂಡನ್ ನಗರದ 'ವೂಲವರ್ಥ' ಸ್ಟೇಷನರಿ ಅಂಗಡಿಯು ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 * 3 = 3**

32. ಮಾತೇ ಮುತ್ತು; ಮಾತೇ ಮೃತ್ಯು.
ಅಥವಾ
ಆಡು ಮುಟ್ಟದ ಸೊಪ್ಪಿಲ್ಲ. ಕೂಡಿ ಬಾಳಿದರೆ ಸ್ವರ್ಗ ಸುಖ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 * 3 = 18**

33. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."
34. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆವುದೇ?"
35. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"

36. "ಮನುಜರ ನಡುವಣ ಅಡ್ಡಗೋಡೆಗಳ ಕೆಡವುತ ಸೇತುವೆಯಾಗೋಣ"
37. "ಮಂಗಳ ಲೋಕದ ಅಂಗಳಕೇರಿ"
38. "ಮೋಸ ಮಾಡಿ ನಮದೇಶ ಗೆದಿತಾರೊ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 * 4 = 4**

39. ಕೊಡಲಿ ____________

____________

____________

____________ ನಾನೆಷ್ಟಾ ।

ಅಥವಾ

ಸಿಕ್ಕಿದ್ದು ____________

____________

____________

____________ ಜನಕಾ ।

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಆಧರಿಸಿ ಸಾರಾಂಶವನ್ನು ಬರೆಯಿರಿ. 1 * 4 = 4**

40. ಕಲುಷಿತವಾದೀ ನದೀ ಜಲಗಳಿಗೆ
ಮುಂಗಾರಿನ ಮಳೆಯಾಗೋಣ.
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 * 4 = 8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಅಥವಾ

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

42. ಶ್ರೀ ಕೃಷ್ಣನು ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸಿ, ಒಡ್ಡಿದ ಆಮಿಷಗಳೇನು? ವಿವರಿಸಿ.

ಅಥವಾ

ಪಾಂಡವರು ಸೋದರರೆಂದು ತಿಳಿಸಿ, ಆಮಿಷ ಒಡ್ಡಿದ ಶ್ರೀಕೃಷ್ಣನಿಗೆ ಕರ್ಣನ ಪ್ರತ್ಯುತ್ತರ ಏನೆಂಬುದನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**

ಪ್ರಾಗ್ಜ್ಯೋತಿಷನಾದ ಭಗದತ್ತನು ಸುಪ್ರತೀಕವೆಂಬ ಆನೆಯೊಂದಿಗೆ ಭೀಮನನ್ನು ಎದುರುಗೊಂಡನು. ಈ ಆನೆಯನ್ನು ಮಣಿಸಲು ಭೀಮನಿಂದಲೂ ಸಾಧ್ಯವಿಲ್ಲ. ಇದನ್ನು ಮಣಿಸುವುದು ಕೃಷ್ಣಾರ್ಜುನರಿಗೆ ಮಾತ್ರ ಗೊತ್ತು. ಇಂದ್ರನ ಸಖನಾದ ಭಗದತ್ತನು ಪುರುಷಶ್ರೇಷ್ಠನೆಂದೂ ಪ್ರಸಿದ್ಧನು. ಇಂದು ಆತನನ್ನು ಸೋಲಿಸಲೇ ಬೇಕೆಂದು ಪಣತೊಟ್ಟು ಕೃಷ್ಣಾರ್ಜುನರು ಮುಂದೆ ಹೋಗುವಷ್ಟರಲ್ಲಿ ತ್ರಿಗರ್ತರು ಅರ್ಜುನನ್ನು ಎದುರುಗೊಂಡು ಕಾದಾಡಲು ಪ್ರಾರಂಭಿಸಿದರು. ಸುಶರ್ಮನು ಅವನ ಸಹೋದರರು ಅರ್ಜುನನ ಮೇಲೆರಗಿ ಬಂದರು. ಅರ್ಜುನನು ಇನ್ನಿಲ್ಲದಂತೆ ಹೋರಾಡಿ, ಅವರನ್ನು ಸೋಲಿಸಿ, ಅವರ ಸೈನ್ಯವನ್ನು ದಿಕ್ಕಾಪಾಲಾಗಿ ಚದುರಿಸಿದನು. ಕೃಷ್ಣ ಆಜ್ಞೆಯಂತೆ ಅರ್ಜುನನು ತಂದೆಯನ್ನು ಸ್ಮರಿಸಿ, ವಜ್ರಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಲು ಸುಶರ್ಮನು ರಥದಲ್ಲಿಯೇ ಮೂರ್ಛಿತನಾದನು. ಇದನ್ನು ಕಂಡ ಕೃಷ್ಣನು "ಅರ್ಜುನ, ಇಂದು ಬಹಳ ಚೆನ್ನಾಗಿ ಕಾದಾಡಿದೆ. ತ್ರಿಗರ್ತರನ್ನು ಏಕಾಂಗಿಯಾಗಿ ಸೋಲಿಸಿದೆ. ಭಗದತ್ತ ಮತ್ತು ಅವನ ಆನೆಯನ್ನು ಮಣಿಸಿದೆ. ನಿನ್ನಂತಹ

ಧನುರ್ಧಾರಿಯನ್ನು ನೋಡಿ ನನಗೆ ಹೆಮ್ಮೆ ಎನಿಸಿದೆ" ಎಂದನು. ಯುದ್ಧದ ಸಂದರ್ಭದಲ್ಲಿ ಭಗದತ್ತನು ಪ್ರಯೋಗಿಸಿದ ವೈಷ್ಣವಾಸ್ತ್ರವು ಭಗದತ್ತನಿಗೆ ದೊರಕಿದ ಸಂದರ್ಭವನ್ನು ಕೃಷ್ಣನು ಯುದ್ಧಭೂಮಿಯಲ್ಲಿ ಅರ್ಜುನನಿಗೆ ಹೀಗೆ ತಿಳಿಸುತ್ತಾನೆ. "ಒಂದು ಸಲ ಯಾವುದೋ ಕೆಟ್ಟ ಗಳಿಗೆಯಲ್ಲಿ ನಾನು ಈ ಅಸ್ತ್ರವನ್ನು ನರಕಾಸುರನ ತಾಯಿಯಾದ ಪೃಥ್ವಿಗೆ ಕೊಟ್ಟೆನು. ಯಾವ ಆಯುಧದಿಂದಲೂ ತನ್ನ ಮಗನಿಗೆ ಸಾವು ಸಂಭವಿಸಬಾರದೆಂಬ ಆಸೆಯಿಂದ ಅವಳು ಅದನ್ನು ತನ್ನ ಮಗನಿಗೆ ಕೊಟ್ಟಳು. ನರಕಾಸುರನು ಅದನ್ನು ಭಗದತ್ತನಿಗೆ ಕೊಟ್ಟನು. ಅದು ಯಾರ ಮೇಲೆ ಪ್ರಯೋಗವಾದಗಲೂ ಅವರನ್ನು ಅದು ಕೊಲ್ಲದೇ ಬಿಡುತ್ತಿರಲಿಲ್ಲ. ಈಗ ನನ್ನ ಅಸ್ತ್ರವು ನನ್ನ ಬಳಿಗೆ ಬಂದು ನನ್ನನ್ನು ಸೇರಿದೆ.

**ಪ್ರಶ್ನೆಗಳು :**

43. ಅ) ವೈಷ್ಣವಾಸ್ತ್ರವು ಭಗದತ್ತನಿಗೆ ಹೇಗೆ ದೊರಕಿತು?

43. ಬ) ಕೃಷ್ಣನು ಅರ್ಜುನನ್ನು ನಿನ್ನಂತಹ ಧರ್ನುಧಾರಿಯನ್ನು ನೋಡಿ ಹೆಮ್ಮೆ ಎನಿಸಿದೆ ಎನ್ನಲು ಕಾರಣವೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ. 1 * 5 = 5**

44. ನಿಮ್ಮನ್ನು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಜಗದೀಶ' ಭಾವಿಸಿಕೊಂಡು, ನಿಮ್ಮ ಶಾಲೆಯ ಆವರಣದಲ್ಲಿ ನೆಡಲು ಉಚಿತವಾಗಿ ಸಸಿಗಳನ್ನು ನೀಡುವಂತೆ ಕೋರಿ ನಿಮ್ಮ ಜಿಲ್ಲೆಯ ವಲಯ ಅರಣ್ಯಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ.

    ಅಥವಾ

    ನಿಮ್ಮನ್ನು ತುಮಕೂರಿನ ಸಿದ್ಧಗಂಗಾ ಮಠದ ವಸತಿ ಶಾಲೆಯ ವಿದ್ಯಾರ್ಥಿನಿ 'ಜಯಲಕ್ಷ್ಮಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ ಪೋಷಕರ ಸಭೆಯಲ್ಲಿ ಭಾಗವಹಿಸುವಂತೆ ವಿನಂತಿಸಿ, ಕನಕಪುರದಲ್ಲಿರುವ ವಾಸವಿರುವ 'ಶಾರದಮ್ಮ' ಎಂಬ ಹೆಸರಿನ ತಾಯಿ ಅವರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**
**1 * 5 = 5**

45. ಅಂತರ್ಜಲ ಮರುಪೂರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು.

    ಅಥವಾ

    ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು

---- 0 ----

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟೆಂಬರ್ – 2019

## 10 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**ಸಮಯ : 3.00 ಗಂಟೆಗಳು** **ಗರಿಷ್ಠ ಅಂಕಗಳು : 100**

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **6 * 1 = 6**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರಸಹಿತ ಪದವಿದು;
   (ಎ) ಉಷ್ಣ (ಬಿ) ಅಸ್ತ್ರ
   (ಸಿ) ಅಕ್ಷರ (ಡಿ) ಯುದ್ಧ

   **ಉತ್ತರ : (ಡಿ) ಯುದ್ಧ**

2. 'ಸದ್ಗುಣ' ಪದದಲ್ಲಿ ಆಗಿರುವ ಸಂಧಿ;
   (ಎ) ಸವರ್ಣದೀರ್ಘ (ಬಿ) ವೃದ್ಧಿ
   (ಸಿ) ಜಶ್ತ್ವ (ಡಿ) ಗುಣ

   **ಉತ್ತರ : (ಸಿ) ಜಶ್ತ್ವ**

3. ಇವುಗಳಲ್ಲಿ ಕನ್ನಡದ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ತೇಜಕೆಡೆ (ಬಿ) ತೇಜಗೆಡೆ
   (ಸಿ) ಸ್ಥೈರ್ಯಕೆಡೆ (ಡಿ) ಸ್ಥೈರ್ಯವಾಂತು

   **ಉತ್ತರ : (ಬಿ) ತೇಜಗೆಡೆ**

4. 'ಬರಡಾಗಿರುವೀ ಕಾಡುಮೇಡುಗಳ ವಸಂತವಾಗುತ ಮುಟ್ಟೋಣ. – ಈ ವಾಕ್ಯದಲ್ಲಿರುವ 'ಮುಟ್ಟೋಣ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
   (ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ
   (ಸಿ) ನಿಷೇಧಾರ್ಥಕ (ಡಿ) ಭಾವನಾರ್ಥಕ

   **ಉತ್ತರ : (ಎ) ವಿಧ್ಯರ್ಥಕ**

5. ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸಬೇಕು;
   (ಎ) ಅಲ್ಪವಿರಾಮ (ಬಿ) ಪೂರ್ಣವಿರಾಮ
   (ಸಿ) ಅರ್ಧವಿರಾಮ (ಡಿ) ಪ್ರಶ್ನಾರ್ಥಕ

   **ಉತ್ತರ : (ಬಿ) ಪೂರ್ಣವಿರಾಮ**

6. ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು ಮತ್ತು 'ಕೈಗಾರಿಕೆ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು. – ಈ ವಾಕ್ಯವು
   (ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ
   (ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

   **ಉತ್ತರ : (ಸಿ) ಸಂಯೋಜಿತ ವಾಕ್ಯ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4 * 1 = 4**

**(ಪ್ರತಿ ಸರಿಯುತ್ತರಕ್ಕೆ 1 ಅಂಕ)**

7. ದೃಷ್ಟಿ : ದಿಟ್ಟಿ : : : ಪ್ರಸಾದ : **ಹಸಾದ.**
8. ಇನತನೂಜ : ಕರ್ಣ : : ರಾಜೀವಸಖ : **ಸೂರ್ಯ.**
9. ಹಾಗೆ : ಸಾಮಾನ್ಯಾರ್ಥಕಾವ್ಯಯ : : ಹೌದು : **ಕ್ರಿಯಾರ್ಥಕಾವ್ಯಯ**
10. ನುಡಿನುಡಿ : ದ್ವಿರುಕ್ತಿ : : ನಾಡುನುಡಿ : **ಜೋಡುನುಡಿ.**

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

11. ಮುದುಕಿಯ ಸೊಸೆಯು ಯಾವ ಬೇನೆಯಿಂದ ನರಳುತ್ತಿದ್ದಳು?
ಮುದುಕಿಯ ಸೊಸೆಯು **ಹೆರಿಗೆ ಬೇನೆಯಿಂದ** ನರಳುತ್ತಿದ್ದಳು.
12. ಮುದುಕಿಯ ಮಗನು ಎಲ್ಲಿಗೆ ಹೋಗಿದ್ದನು?
ಮುದುಕಿಯ ಮಗನು **ಯುದ್ಧಕ್ಕೆ** ಹೋಗಿದ್ದನು.
13. ಲಂಡನ್ ನಗರದ ಟ್ರಾಫಲ್ಗಾರ್ ಸ್ಕ್ವೇರ್‌ನಲ್ಲಿ ಯಾರ ಮೂರ್ತಿಯಿದೆ?
ಲಂಡನ್ ನಗರದ ಟ್ರಾಫಲ್ಗಾರ್ ಸ್ಕ್ವೇರ್‌ನಲ್ಲಿ **ನೆಲ್ಸನ್ನನ** ಮೂರ್ತಿಯಿದೆ.
14. 'ಪ್ರಜಾಪ್ರತಿನಿಧಿ ಸಭೆ'ಯು ಯಾರ ಕಾಲದಲ್ಲಿ ನೂತನ ರೂಪವನ್ನು ಪಡೆಯಿತು?
'ಪ್ರಜಾಪ್ರತಿನಿಧಿ ಸಭೆ'ಯು **ನಾಲ್ವಡಿ ಕೃಷ್ಣರಾಜ ಒಡೆಯರ್** ಅವರ ಕಾಲದಲ್ಲಿ ನೂತನ ರೂಪವನ್ನು ಪಡೆಯಿತು.
15. ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ ಸುತ್ತಲು ಕವಿಯುವ ಕತ್ತಲೆಯೊಳಗೆ ಎಂತಹ ಹಣತೆಯನ್ನು ಹಚ್ಚುವ ಸಂಕಲ್ಪವನ್ನು ಮಾಡಬೇಕು?
ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ ಸುತ್ತಲು ಕವಿಯುವ ಕತ್ತಲೆಯೊಳಗೆ **ಪ್ರೀತಿಯ** ಹಣತೆಯನ್ನು ಹಚ್ಚುವ ಸಂಕಲ್ಪವನ್ನು ಮಾಡಬೇಕು.
16. ದ. ರಾ. ಬೇಂದ್ರೆ ಅವರು ಕಾಲವನ್ನು ಯಾವುದಕ್ಕೆ ಹೋಲಿಸಿದ್ದಾರೆ?
ದ. ರಾ. ಬೇಂದ್ರೆ ಅವರು ಕಾಲವನ್ನು **ಪಕ್ಷಿಗೆ (ಹಕ್ಕಿಗೆ)** ಹೋಲಿಸಿದ್ದಾರೆ.
17. ಸ್ವಾಮಿ ವಿವೇಕಾನಂದ ಅವರು ಯಾವ ವರ್ಗದವರು ತಮ್ಮ 'ಊಳಿಗ ಸ್ವಭಾವ'ವನ್ನು ಬಿಟ್ಟು ಹೊರಬರಬೇಕೆಂದು ಕರೆಕೊಡುತ್ತಾರೆ?
ಸ್ವಾಮಿ ವಿವೇಕಾನಂದ ಅವರು **ಶೂದ್ರ** ವರ್ಗದವರು ತಮ್ಮ 'ಊಳಿಗ ಸ್ವಭಾವ'ವನ್ನು ಬಿಟ್ಟು ಹೊರಬರಬೇಕೆಂದು ಕರೆಕೊಡುತ್ತಾರೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 * 2 = 20**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

18. ಮುದುಕಿಯು ಎದೆ ಬಡಿದುಕೊಂಡು ರೋದಿಸಲು ಕಾರಣವೇನು?
ಸೇನಾ ವೈದ್ಯನಾದ ರಾಹಿಲನು ಹೆರಿಗೆಯ ಬೇನೆಯಿಂದ ನರಳುತ್ತಿದ್ದ ಮುದುಕಿಯ ಸೊಸೆಯಗೆ ಹೆರಿಗೆಯನ್ನು ಮಾಡಿಸಲು ಬಹಳ ಹೊತ್ತಿನ ತನಕ ಪ್ರಯತ್ನ ಮಾಡಿ, ಬಳಿಕ ಮಗುವನ್ನು ಹೊರತೆಗೆದನಾದರೂ ಅದು ನಿರ್ಜೀವವಾಗಿತ್ತು. "ಅನೇಕ ವರ್ಷಗಳಿಂದ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ. ಈ ಯುದ್ಧವಿಲ್ಲದೆ ಹೋಗಿದ್ದರೆ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳಬಹುದಿತ್ತು. ದೇವರೇ, ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ?" ಎಂದು ಹೇಳುತ್ತಾ ಮುದುಕಿಯು ಎದೆಬಡಿದುಕೊಂಡು ರೋದಿಸಿದಳು.

19. ಶಬರಿಯು ರಾಮನ ಗುಣಗಾನವನ್ನು ಹೇಗೆ ಮಾಡಿದ್ದಾಳೆ?

"ದಶರಥನ ಪುತ್ರನಾದ ರಾಮನು ಸಾಧುಜನರ ಮಿತ್ರನು. ಧೀರ ಶೂರ ವೀರ ಗಂಭೀರ ಸದ್ಗುಣ ಸಾರನು. ಅಂಜಿಸುವವರು ಅಂಜುವಂತೆ ಬಿಲ್ಲನ್ನು ಹಿಡಿದು ಬರುವನು. ಆದರೂ ಅವನು ಬಲು ಸೌಮ್ಯನು. ಹಸುಳೆಯಂತೆ ಕಾಣುವನು. ಅರಸುತನವನ್ನು ತೊರೆದು, ತವಸಿತನವ ಹಿಡಿದಿರುವನು. ತಮ್ಮನೊಡನೆ ಕಾಡಿಗೆ ಬರಲು ಮನದಲ್ಲಿ ಭಯವೇ ಇಲ್ಲದವನು. ಕೆಟ್ಟಕನಸಿನ ಇರುಳನ್ನು ಕಳೆವ ಸುಪ್ರಭಾತದಂಥವನು. ಗುರುಸಿದ್ಧರಾದ ಮತಂಗ ಮುನಿಗಳೇ ಮೆಚ್ಚಿದಂತ ಸನ್ಮಂಗಳ ಮೂರ್ತಿ ಇವನು" ಎಂದು ಶಬರಿಯು ರಾಮನ ಗುಣಗಾನ ಮಾಡಿದ್ದಾಳೆ.

20. ಶಬರಿಯು ರಾಮ-ಲಕ್ಷ್ಮಣರನ್ನು ಹೇಗೆ ಸತ್ಕರಿಸಿದಳು?

ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಂಡಳು. ಅಯೋ ಏನೂ ಸಿದ್ಧತೆಯಿಲ್ಲ; ನಿನ್ನೆಯಷ್ಟು ಚೆನ್ನವಿಲ್ಲ ಎಂದು ಹಂಬಲಿಸಿ, ತನ್ನ ಮನದ ಬಯಕೆಯಂತೆ ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ, ಅಬ್ಬ ಎಂದು ಹಿಗ್ಗಿಹಿಗ್ಗಿ ಸಂತಸಪಟ್ಟಳು. "ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ್ತ ತಾನೇ ಅವರ ಕೈಯಲ್ಲಿ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

21. ವಿಶ್ವೇಶ್ವರಯ್ಯ ಅವರು ಮೈಸೂರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿಯನ್ನು ಹಾಕಿದರು?

ವಿಶ್ವೇಶ್ವರಯ್ಯ ಅವರು ಮೈಸೂರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿಯನ್ನು ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಅನೇಕ ಮಾರ್ಪಾಡುಗಳನ್ನು ಮಾಡಿದರು. ಕ್ರಿ. ಶ. 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪನೆ ಮಾಡಿದರು. ಉಳಿತಾಯ ಬ್ಯಾಂಕುಗಳನ್ನು ಅಸ್ತಿತ್ವಕ್ಕೆ ತಂದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕುಗಳನ್ನು ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳನ್ನು ರಚಿಸಿದರು. ಸಾರ್ವಜನಿಕ ಜೀವ ವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯವನ್ನು ನೀಡಲು ಸಹಕಾರಿ ಕ್ಷೇತ್ರವನ್ನು ಬಲಗೊಳಿಸಿ, ಪ್ರಾಂತೀಯ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಿದರು.

22. ಕರ್ಣನು ತನ್ನ ಮಾತಿಗೆ ಒಪ್ಪಿದರೆ ಓಲಗದಲ್ಲಿ ಹೇಗೆ ಒಪ್ಪುವನೆಂದು ಕೃಷ್ಣನು ಹೇಳುತ್ತಾನೆ?

ಕೃಷ್ಣನು ಕರ್ಣನನ್ನು ಕುರಿತು "ನೀನು ನನ್ನ ಮಾತಿಗೆ ಒಪ್ಪಿದರೆ ನಿನಗೆ ಹಸ್ತಿನಾಪುರದ ರಾಜ್ಯದ ಮಹಾರಾಜನನ್ನಾಗಿ ಮಾಡುವೆನು. ಪಾಂಡವರು ಮತ್ತು ಕೌರವರು ನಿನ್ನ ಗದ್ದುಗೆಯನ್ನು ಓಲೈಸುವರು. ಇದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ? ನೀನು ರಾಜಸಭೆಯಲ್ಲಿ ಕುಳಿತಿರುವಾಗ ಎಡದ ಪಕ್ಕದಲ್ಲಿ ಕೌರವರ ಸಮೂಹ, ಬಲದ ಪಕ್ಕದಲ್ಲಿ ಪಾಂಡವರ ಸಮೂಹ, ಎದುರಿನಲ್ಲಿ ಮಾದ್ರ, ಮಾಗಧ, ಯಾದವಾದಿಗಳು. ಇವರ ನೀನು ನಡುವೆ ಶೋಭಿಸುವ ವೈಭವವನ್ನು ತೊರೆದು, ದುರ್ಯೋಧನ ನುಡಿಸಲು 'ಒಡೆಯ ಅನುಗ್ರಹವಾಗಲಿ' ಎಂಬುದು ಹೇಳುವುದು ಕಷ್ಟ ನಿನಗೆ ಕಷ್ಟವಾಗುವುದಿಲ್ಲವೇ?" ಎಂದನು.

23. ಕರ್ಣನು "ಕೃಷ್ಣನು ಕೌರವೇಂದ್ರನನ್ನು ಕೊಂದನು" ಎಂದು ಹೇಳಲು ಕಾರಣವೇನು?

ಕೃಷ್ಣನಿಂದ ತನ್ನ ಜನ್ಮ ರಹಸ್ಯವು ತಿಳಿದಾಗ ಕರ್ಣನ ಕೊರಳ ನರಗಳು ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಹರಿದು ಬಂದಿತು. ಕರ್ಣನು ಮನದೊಳಗೆ ನೊಂದು "ಅಯ್ಯೋ, ದುರ್ಯೋಧನನಿಗೆ ಕೇಡಾದುದು. ಹರಿಯ ಹಗೆತನ ಹೊಗೆ ತೋರದೆ ಉರುಹದೆ ಬರಿದೆ ಹೋಹುದೆ" ಎಂದು ಚಿಂತಿಸಿ, ಕೃಷ್ಣನನ್ನು ಕುರಿತು "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಹಾಗೂ ಕೌರವರು ನನ್ನ ಸೇವೆಯನ್ನು ಮಾಡುವುದು ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ, ದುರ್ಯೋಧನನ್ನು ಕೊಂದೆ" ಎಂದನು.

24. ಸ್ವಾಮಿ ವಿವೇಕಾನಂದ ಅವರು ಏಕೆ ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು?

ವಿವೇಕಾನಂದರ ಧಾರ್ಮಿಕ ಚಿಂತನೆಗಳನ್ನು ಅವಲೋಕಿಸಿದಾಗ ಅವರು ಸ್ಪಷ್ಟವಾಗಿ ಕೋಮುವಾದದ ವಿರೋಧಿಯಾಗಿದ್ದರೆಂದು ತಿಳಿದುಬರುತ್ತದೆ. ಅವರು ಚಿಕಾಗೊ ಧರ್ಮ ಸಮ್ಮೇಳನದಲ್ಲಿ "ಸ್ವಮತಾಭಿಮಾನ ಮತ್ತು ಅನ್ಯಮತದ್ವೇಷ ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಣಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧಮಾಂಧತೆಯ ದೈತ್ಯರಿಲ್ಲದೆಯಿದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರಿಯುತಿತ್ತು. ಆದ್ದರಿಂದ ನಾವು ಎಲ್ಲ ಧರ್ಮಗಳಿಗೂ ಗೌರವ ತೋರಬೇಕು" ಎಂದು ಹೇಳಿದರು. ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದು ಅದೇ ಅಂತಿಮವೆಂದು ನಂಬುತ್ತ ನಂಬಿಸುತ್ತ, ಪರಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾ ವಿರೋಧಿಯಾಗಿದ್ದರು.

25. ಇಂದಿನ ಸನ್ನಿವೇಶದಲ್ಲಿ ಸ್ವಾಮಿ ವಿವೇಕಾನಂದ ಅವರು ಹೆಚ್ಚು ಪ್ರಸ್ತುತರು. ಏಕೆ?
ಇಂದಿನ ಸನ್ನಿವೇಶದಲ್ಲಿ ಸ್ವಾಮಿ ವಿವೇಕಾನಂದ ಅವರು ಹೆಚ್ಚು ಪ್ರಸ್ತುತರು. ಏಕೆಂದರೆ ಇಂದು ಜಾತಿವಾದ ಮತ್ತು ಕೋಮುವಾದಗಳು ಮುನ್ನೆಲೆಗೆ ಬಂದು ಮಾನವೀಯ ಮೌಲ್ಯವನ್ನು ನುಂಗಿ ನೊಣೆಯುತ್ತಿವೆ. ಸಮಾನತೆಯ ಆಶಯಗಳನ್ನು ತಪಿತಸ್ಥ ಶಾಲಾ ಬಾಲಕನಂತೆ ಹಿಂದಿನ ಸಾಲಿನಲ್ಲಿ ಕೈಕಟ್ಟಿ ನಿಲ್ಲಿಸಲಾಗಿದೆ. ಬಡಜನರ ಪರವಾದ ಆದ್ಯತೆಗಳು ಪಲ್ಲಟಗೊಳ್ಳುತ್ತಿವೆ. ಸ್ವಾಮಿ ವಿವೇಕಾನಂದರಿಗೆ ಬಡಜನರ ಹೊಟ್ಟೆಯ ಹಸಿವನ್ನು ಹಿಂಗಿಸುವುದು ಮೊದಲ ಆದ್ಯತೆಯಾಗಿತ್ತು. ಆನಂತರ ಧರ್ಮ. ಜಾತಿವಾದದ ವಿಷಯಕ್ಕೆ ಬಂದರೆ ಹಿಂದುಳಿದ ಹಾಗೂ ದಲಿತ ಜಾತಿಗಳ ಬಗ್ಗೆ ಅವರಿಗೆ ಸಹಜವಾದ ಸಾಮಾಜಿಕ ಕಳಕಳಿಯಿತ್ತು. ಹೀಗಾಗಿಯೇ ಅವರು ಸಂಶಯಕ್ಕೆಡೆಯಿಲ್ಲದಂತೆ ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ವಿರೋಧಿಸಿದರು.

26. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
ಋತುಗಳ ರಾಜನಾದ ವಸಂತನ ಆಗಮನದ ಸಮಯದಲ್ಲಿ ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹಸುರಾದ ಎಲೆಗಳು ಮತ್ತು ಹಣ್ಣುಗಳಿಂದ ಮೈ ತುಂಬಿ ನಿಂತಿವೆ. ಆಕಾಶದಲ್ಲಿ ಹಕ್ಕಿಗಳು ರೆಕ್ಕೆಯನ್ನು ಬಿಚ್ಚಿ ಹಾರುತ್ತಿವೆ. ಮಾವಿನ ಚಿಗುರನ್ನು ತಿಂದು ಕೋಗಿಲೆಗಳು ಮನದುಂಬಿ ಹಾಡುತ್ತಿವೆ. ಕಡಲು ಉಕ್ಕಿ ಹರಿಯುತ್ತಿದೆ. ಇಳೆಯು ವಸಂತನ ಆಗಮನದ ಸಂತಸದಲ್ಲಿ ಮುಳುಗಿ ಸಂಭ್ರಮಿಸುತ್ತಿದೆ. ಮಲ್ಲಿಗೆಯ ಹೂವುಗಳು ಅರಳಿ ಮುಗುಳು ನಗೆ ಬೀರುತ್ತಿವೆ. ಮನೆಯ ಮುಂದಿನ ಹೊಳೆಯುವ ರಂಗೋಲಿಯಲ್ಲಿ ಬಾಲರವಿಯು ಥಳಥಳಿಸುತ್ತಿದ್ದಾನೆ. ಹೀಗೆ 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ವ್ಯಕ್ತವಾಗಿದೆ.

27. 'ವಸಂತ ಯಾರಿಗೆ ಮುಖ ತೋರಲಿಲ್ಲ' ಕವನದಲ್ಲಿ ಪುಟ್ಟಿಯ ಮನೆಯ ವಾತಾವರಣವನ್ನು ಕುರಿತು ಕವಯಿತ್ರಿಯು ಹೇಗೆ ವರ್ಣಿಸಿದ್ದಾರೆ?
"ಋತುಗಳ ರಾಜನಾದ ವಸಂತನ ಆಗಮನದ ಸಮಯದಲ್ಲಿ ಪ್ರಕೃತಿಯಲ್ಲಿ ಎಲ್ಲೆಲ್ಲೂ ಸಂಭ್ರಮ ಕಂಡುಬರುತ್ತದೆ. ಆದರೆ ಪುಟ್ಟಪೋರಿಯ ತಾಯಿಯು ಗುಡಿಸಿಲಿನಲ್ಲಿ ಅನಾರೋಗ್ಯದಿಂದ ಗೂರುತ್ತ ಮಲಗಿದ್ದಾಳೆ. ಅವಳ ಗುಡಿಸಲಿನಲ್ಲಿರುವ ತೂತು ಬಿದ್ದ ಸೀರೆಯಲ್ಲಿ ಬಾಲಸೂರ್ಯನು ಸೊರಗಿದ್ದಾನೆ. ಆ ಗುಡಿಸಲಿನಲ್ಲಿರುವ ಗೋಡೆಗಳು ಸುಣ್ಣವನ್ನು ಕಂಡು ಎಷ್ಟೂ ವರ್ಷಗಳಾಗಿರುವುದರಿಂದ ಮುಖಮುಚ್ಚಿಕೊಂಡಂತೆ ಕಾಣುತ್ತಿವೆ. ಇಂತಹ ಕತ್ತಲು ಕವಿದಿರುವ ಗುಡಿಸಿನೊಳಗೆ ಬರಲು ಬಹುಶಃ ವಸಂತನಿಗೂ ಹೆದರಿಕೆಯಾಗಿರಬೇಕು" ಎಂದು 'ವಸಂತ ಯಾರಿಗೆ ಮುಖ ತೋರಲಿಲ್ಲ' ಕವನದಲ್ಲಿ ಪುಟ್ಟಿಯ ಮನೆಯ ವಾತಾವರಣವನ್ನು ಕುರಿತು ಕವಯಿತ್ರಿಯು ಹೇಗೆ ವರ್ಣಿಸಿದ್ದಾರೆ.

**V. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

**2 * 3 = 6**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ವಾಕ್ಯರೂಪದಲ್ಲಿ ಬರೆಯುವುದು, ಭಾಷಾ ಶೈಲಿ** | **1 ಅಂಕ** |
| **ಒಟ್ಟು** | **3 ಅಂಕಗಳು** |

28. ವಿ. ಕೃ. ಗೋಕಾಕ್
**'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕ್ ಅವರು **ಕ್ರಿ. ಶ. 1909** ರಲ್ಲಿ ಹಾವೇರಿ ಜಿಲ್ಲೆಯ **ಸವಣೂರಿನಲ್ಲಿ** ಜನಿಸಿದರು. ಇವರು ಪುಣೆಯ ಫರ್ಗೂಸನ್ ಕಾಲೇಜು, ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಬೆಂಗಳೂರು ವಿಶ್ವವಿದ್ಯಾನಿಲದ ಕುಲಪತಿಗಳಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯದ ನವ್ಯಕಾವ್ಯ ಪರಂಪರೆಯ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಇವರು ಸಮುದ್ರದಾಚೆಯಿಂದ, ಜೀವನಪಾಠಗಳು, ಭಾರತ ಸಿಂಧು ರಶ್ಮಿ, ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ದ್ಯಾವಾಪೃಥಿವೀ, ಸಮರಸವೇ ಜೀವನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ 'ದ್ಯಾವಾಪೃಥಿವೀ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಶ್ರೀಯುತರಿಗೆ ಭಾರತ ಸರ್ಕಾರವು 'ಪದ್ಮಶ್ರೀ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಇವರ ಸಮಗ್ರ ಸಾಹಿತ್ಯ ಸೇವೆಯನ್ನು ಗುರುತಿಸಿ 'ಭಾರತೀಯ ಜ್ಞಾನಪೀಠ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗಿದೆ. ಇವರಿಗೆ ಕರ್ನಾಟಕ ವಿಶ್ವವಿದ್ಯಾಲಯವು 'ಗೌರವ ಡಾಕ್ಟರೇಟ್ ಪದವಿ'ಯನ್ನು ಹಾಗೂ ಬೆಂಗಳೂರು ವಿಶ್ವವಿದ್ಯಾಲಯ 'ಗೌರವ ಡಾಕ್ಟರೇಟ್' ಪದವಿಯನ್ನು ನೀಡಿ ಗೌರವಿಸಿದೆ.

29. ದ. ರಾ. ಬೇಂದ್ರೆ

**ಅಂಬಿಕಾತನಯದತ್ತ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ** ಅವರು **ಕ್ರಿ. ಶ. 1896** ರಲ್ಲಿ **ಧಾರವಾಡ**ದಲ್ಲಿ ಜನಿಸಿದರು. ಪ್ರೌಢಶಾಲಾ ಅಧ್ಯಾಪಕರಾಗಿ, ಸೊಲ್ಲಾಪುರದ ರಾಜಾರಾಮ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಧಾರವಾಡದ ಬನುಲಿ ಕೇಂದ್ರದ ಸಲಹೆಗಾರರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡದ ನವೋದಯ ಸಾಹಿತ್ಯ ಪ್ರಕಾರದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು **ಗರಿ,** ನಾಕುತಂತಿ, ನಾದಲೀಲೆ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ ಹೊಗೆ, ಸಾಹಿತ್ಯದ ವಿರಾಟ್ ರೂಪ. ಅರಳು ಮರಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ, ಮರಾಠಿ, ಇಂಗ್ಲಿಷ್, ಭಾಷೆಗಳಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಇವರ 'ನಾಕುತಂತಿ' ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಇವರ 'ಅರಳು–ಮರಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಇವರು ಕ್ರಿ. ಶ. 1943 ರಲ್ಲಿ ಶಿವಮೊಗ್ಗದಲ್ಲಿ ನಡೆದ 27 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

## VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 * 3 = 3

| | |
|---|---|
| **ಪ್ರಸ್ತಾರ ಹಾಕುವುದು** | **1 ಅಂಕ** |
| **ಗಣ ವಿಭಾಗಿಸುವುದು** | **1 ಅಂಕ** |
| **ಛಂದಸ್ಸಿನ ಹೆಸರು ಬರೆಯುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

30. ಏನು ಹೇಳ್ಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥

| | | | |
|---|---|---|---|
| 3 | 4 | 3 | 4 |
| — ∪ | — — | — ∪ | — — |
| ಏನು | ಹೇಳ್ಳೈ | ಕರ್ಣ | ಚಿತ್ತ |

| | | | |
|---|---|---|---|
| 3 | 4 | 3 | 4 |
| — ∪ | — ∪ ∪ | ∪ ∪ ∪ | — — |
| ಗ್ಲಾನಿ | ಯಾವುದು | ಮನಕೆ | ಕುಂತೀ |

| | | | | | | |
|---|---|---|---|---|---|---|
| 3 | 4 | 3 | 4 | 3 | 4 | ಗುರು |
| — ∪ | ∪∪ ∪∪ | — ∪ | — ∪ ∪ | — ∪ | — ∪ ∪ | — |
| ಸೂನು | ಗಳಬೆಸೆ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

**ಈ ಮೇಲಿನ ಪದ್ಯವು ಮಾತ್ರಾ ಗಣದ 'ಭಾಮಿನಿ ಷಟ್ಪದಿ'ಯಲ್ಲಿ ರಚಿತವಾಗಿದೆ.**

## VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1 * 3 = 3

| | |
|---|---|
| **ಅಲಂಕಾರವನ್ನು ಹೆಸರಿಸುವುದು** | **1 ಅಂಕ** |
| **ಲಕ್ಷಣ ಬರೆಯುವುದು** | **1 ಅಂಕ** |
| **ಸಮನ್ವಯ ಮಾಡುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

31. ಲಂಡನ್ ನಗರದ 'ವೂಲವರ್ಥ' ಸ್ಟೇಷನರಿ ಅಂಗಡಿಯು ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ.

| | | |
|---|---|---|
| **ಅಲಂಕಾರ** | : | **ಉಪಮಾಲಂಕಾರ** |
| **ಲಕ್ಷಣ** | : | ಎರಡು ವಸ್ತುಗಳಿಗಿರುವ (ಉಪಮೇಯ ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು. |
| **ಉಪಮೇಯ** | : | ಲಂಡನ್ ನಗರದ 'ವೂಲವರ್ಥ' ಸ್ಟೇಷನರಿ ಅಂಗಡಿ. |
| **ಉಪಮಾನ** | : | ಪ್ರಾಚೀನ ಮಹಾಕಾವ್ಯ |
| **ಉಪಮಾ ವಾಚಕ** | : | ಅಂತೆ |
| **ಸಮಾನ ಧರ್ಮ** | : | ಮಹಾಕೋಶವಾಗಿರುವುದು. |
| **ಸಮನ್ವಯ** | : | **ಇಲ್ಲಿ ಉಪಮೇಯವಾದ** ಲಂಡನ್ ನಗರದ 'ವೂಲವರ್ಥ' ಸ್ಟೇಷನರಿ ಅಂಗಡಿಯನ್ನು ಉಪಮಾನವಾದ ಪ್ರಾಚೀನ ಮಹಾಕಾವ್ಯಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ. |

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 * 3 = 3**

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

32. ಮಾತೇ ಮುತ್ತು; ಮಾತೇ ಮೃತ್ಯು.
ಅಥವಾ
ಕೂಡಿ ಬಾಳಿದರೆ ಸ್ವರ್ಗ ಸುಖ.
ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬು ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ಕೂಡಿಬಾಳಿದರೆ ಸ್ವರ್ಗ ಸುಖ'** ಎಂಬ ಗಾದೆಯೂ ಸಹ ಒಂದಾಗಿದೆ.
ಒಂದೊಂದು ಕಡ್ಡಿಯನ್ನು ಬಹುಸುಲಭವಾಗಿ ಮುರಿದುಹಾಕಬಹುದು. ಆದರೆ ಅನೇಕ ಕಡ್ಡಿಗಳನ್ನು ಒಟ್ಟಿಗೆ ಸೇರಿಸಿ ಕಟ್ಟುಕಟ್ಟಿ ಮುರಿಯಲು ಸಾಧ್ಯವಿಲ್ಲ. ಸಮಾಜದಲ್ಲಿ ವ್ಯಕ್ತಿಯು ಏಕಾಂಗಿಯಾಗಿ ಬದುಕಲು ಸಾಧ್ಯವಿಲ್ಲ. ಎಲ್ಲರೊಡನೆಯೂ ಕೂಡಿ ಬಾಳಿದಾಗ ಮಾತ್ರ ಸಂತೋಷವನ್ನು ಕಾಣಲು ಸಾಧ್ಯ. ವ್ಯಕ್ತಿಯು ಕುಟುಂಬದವರೊಡನೆ, ಸಮಾಜದವರೊಡನೆ ಸಾಮರಸ್ಯದಿಂದ ಕೂಡಿ ಬಾಳುವುದರಿಂದ ತನ್ನ ಸುಖದುಃಖಗಳನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ. 'ಮಾನವ ಸಂಘ ಜೀವಿ; ಸಮಾಜ ಜೀವಿ', 'ಒಗ್ಗಟಿನಲ್ಲಿ ಬಲವಿದೆ' ಎಂಬ ಮಾತುಗಳು ಈ ಗಾದೆಯ ಮಾತನ್ನು ಪುಷ್ಟೀಕರಿಸುತ್ತವೆ. ಎಲ್ಲರೊಡನೆ ಕಲೆತು ಬಾಳುವೆಯನ್ನು ನಡೆಸಿದಾಗ ಸ್ವರ್ಗಸುಖವು ನಮಗೆ ದೊರೆಯುತ್ತದೆ ಎಂಬುದನ್ನು ಈ ಗಾದೆಯು ಸಮರ್ಥವಾಗಿ ಅರ್ಥೈಸುತ್ತದೆ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 * 3 = 18**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಸ್ವಾರಸ್ಯ : ಅಂತರಾರ್ಥ – ಭಾಷೆ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

33. "ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ."
**ಆಯ್ಕೆ :** ಈ ವಾಕ್ಯವನ್ನು **ಶ್ರೀಮತಿ ಸಾರಾ ಅಬೂಬಕರ್** ಅವರು ರಚಿಸಿರುವ **'ಚಪ್ಪಲಿಗಳು'** ಕಥಾ ಸಂಕಲನದಿಂದ ಆಯ್ದ **'ಯುದ್ಧ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಮುದುಕಿಯ ಸೊಸೆಯು ಹೆರಿಗೆಯ ನೋವಿನಿಂದ ನರಳುವುದನ್ನು ನೋಡಿ, ಆಕೆಯನ್ನು ಪರೀಕ್ಷಿಸಲು ಮುದುಕಿಯೊಡನೆ ಕೋಣೆಗೆ ಹೋದ ಸಂದರ್ಭದಲ್ಲಿ ಸೇನಾವೈದ್ಯನಾದ ರಾಹಿಲನು ಈ ಮಾತನ್ನು ಮುದುಕಿಗೆ ಹೇಳುತ್ತಾನೆ.

**ಸ್ವಾರಸ್ಯ :** ತಾನು ಗಾಯಗೊಂಡು ಕಷ್ಟದಲ್ಲಿದ್ದರೂ ತನ್ನ ನೋವನ್ನು ಲೆಕ್ಕಿಸದೇ ಗರ್ಭಿಣಿಯೊಬ್ಬಳನ್ನು ಪರೀಕ್ಷಿಸಲು ಮುಂದಾದ ವೈದ್ಯ ರಾಹಿಲನ ಪರೋಪಕಾರ ಗುಣವು ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ.

34. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆವುದೇ?"

**ಆಯ್ಕೆ :–** ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :– ಮತಂಗಾಶ್ರಮವನ್ನು ಪ್ರವೇಶಿಸಿದ** ಸಂದರ್ಭದಲ್ಲಿ "ಎಂದು ಕಾಣುವೆನು ಶ್ರೀರಾಮನನ್ನು, ಸನ್ಮಂಗಳ ಮೂರುತಿಯನ್ನು" ಎಂದು ಹಾಡುತ್ತ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡು ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನಂತೆ "ದಾರಿಗರಾದ ನಮಗೆ ಇಲ್ಲಿ ಉಳಿದುಕೊಳ್ಳಲು ಸ್ಥಳಾವಕಾಶ ದೊರೆಯುವುದೇ?" ಎಂದು ಕೇಳುವುದು ಸ್ವಾರಸ್ಯ ಪೂರ್ಣವಾಗಿದೆ.

35. "ಮನೆ ಹಿಡಿದು ಇರುವ ತರುಣನ ಬುದ್ಧಿ ಮನೆಯ ಮಟ್ಟದ್ದೇ"

**ಆಯ್ಕೆ :–** ಈ ವಾಕ್ಯವನ್ನು ವಿ. ಕೃ. ಗೋಕಾಕ್ ಅವರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸ ಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಲೇಖಕರು ತಮ್ಮ ಪ್ರವಾಸದ ವರ್ಣನೆಯನ್ನು ಮುಕ್ತಾಯ ಮಾಡುವ ಸಂದರ್ಭದಲ್ಲಿ ಷೇಕ್ಸ್ ಪಿಯರ್ ಈ ಮಾತು ಅವರ ಮನದಲ್ಲಿ ಮೂಡುತ್ತದೆ.

**ಸ್ವಾರಸ್ಯ :–** ಪ್ರವಾಸದಿಂದ ಮನಸ್ಸು ವಿಕಾಸ ಹೊಂದುತ್ತದೆ; ದೃಷ್ಟಿಯು ವಿಶಾಲವಾಗುತ್ತದೆ. "ಪ್ರವಾಸ ಮಾಡದೆ ಮನೆಯಲ್ಲೇ ಕುಳಿತ ತರುಣನ ಜ್ಞಾನ ವಿಕಾಸವಾಗುವುದಿಲ್ಲ. ಆತನು 'ಬಾವಿಯೊಳಗಿನ ಕಪ್ಪೆಯಂತೆ' ಅಲ್ಪಜ್ಞಾನಿ ಆಗುತ್ತಾನೆ" ಎಂಬುದನ್ನು ಈ ಮಾತು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ.

36. "ಮನುಜರ ನಡುವಣ ಅಡ್ಡಗೋಡೆಗಳ ಕೆಡವುತ ಸೇತುವೆಯಾಗೋಣ"

**ಆಯ್ಕೆ :** ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** "ನಾವು ಮನುಜರ ನಡುವೆ ಇರುವ ಜಾತಿ, ಧರ್ಮ, ಮತಗಳೆಂಬ ಅಡ್ಡಗೋಡೆಗಳನ್ನು ಕೆಡವಿ. ಪಂಪನ 'ಮಾನವ ಜಾತಿ ತಾನೊಂದೆ ವಲಂ' ಎಂಬ ಸಮಾನತೆಯ ಭಾವನೆಯಿಂದ ಮನುಜರನ್ನು ಬೆಸೆಯುವ ಸೇತುವೆಯಾಗುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು" ಎಂಬುದನ್ನು ಕವಿಗಳು ಈ ಮಾತುಗಳಲ್ಲಿ ಬಹು **ಸ್ವಾರಸ್ಯ**ಪೂರ್ಣವಾಗಿ ಅಭಿವ್ಯಕ್ತಪಡಿಸುತ್ತಾರೆ.

37. "ಮಂಗಳ ಲೋಕದ ಅಂಗಳಕೇರಿ"

**ಆಯ್ಕೆ :** ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲ ಪಕ್ಷಿಯು ಹಾರುತ್ತಾ, ಆಡುತ್ತಾ, ಹಾಡುತ್ತಾ ಮಂಗಳಲೋಕದ (ಮಂಗಳ ಗ್ರಹ) ಅಂಗಳವನ್ನು ಸಹ ಏರಲಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** ಮಾನವನು ಭೂಮಿಯಿಂದ ಇತರ ಗ್ರಹ, ಉಪಗ್ರಹಗಳಿಗೆ ಸಂಚರಿಸಬಹುದಾದ ದಾರ್ಶನಿಕ ಹಾಗೂ ವೈಜ್ಞಾನಿಕ ಪ್ರಗತಿಯ ಮುನ್ನೋಟ ಈ ನುಡಿಯಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತವಾಗಿದೆ.

38. "ಮೋಸ ಮಾಡಿ ನಮದೇಶ ಗೆದಿತಾರೊ"

**ಆಯ್ಕೆ :** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :** ಬ್ರಿಟಿಷ್ ಸರ್ಕಾರದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ, ಹಲಗಲಿಯ ಬೇಡರು ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆಯೆದ್ದಾಗ, ಹೆನ್ರಿ ಹೆವಲಾಕ್ ಎಂಬ ಬ್ರಿಟಿಷ್ ಅಧಿಕಾರಿಯು "ನಮ್ಮ ಮಾತು ಕೇಳಿ, ನಿಮ್ಮ ಶಸ್ತ್ರಾಸ್ತ್ರಗಳನ್ನು ನಮಗೆ ಒಪ್ಪಿಸಿ, ನಿಮಗೆ ನಾವು ಸಹಾಯವನ್ನು ಮಾಡುತ್ತೇವೆ" ಎಂದು ಹೇಳಿದ ಸಂದರ್ಭದಲ್ಲಿ ಜಡಗನು ಈ ಮಾತನ್ನು ತನ್ನ ಜನರಿಗೆ ಹೇಳುತ್ತಾನೆ.

**ಸ್ವಾರಸ್ಯ :** ಜಡಗನು "ಬ್ರಿಟಿಷ್ ಅಧಿಕಾರಿಗಳು ಕೊಟ್ಟ ಮಾತಿನಂತೆ ಎಂದೂ ನಡೆದು ಕೊಂಡಿಲ್ಲ, ನಂಬಿಸಿ ಮೋಸಮಾಡಿ ನಮ್ಮ ದೇಶವನ್ನು ಗೆಲ್ಲುವ ಹುನ್ನಾರ ಮಾಡುತ್ತಾರೆ" ಎಂದು ಹೇಳುತ್ತಾನೆ. "ಬ್ರಿಟಿಷರು ನಂಬಿಕೆಗೆ ಅರ್ಹರಲ್ಲ" ಎಂಬುದು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 * 4 = 4**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1 ಅಂಕ)**

39. ಕೊಡಲಿ **ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ**
**ಉಪ್ಪು ಎಣ್ಣಿ ಅರಿಸಿಣ ಜೀರಿಗಿ ಅಕ್ಕಿ ಸಕ್ಕಾರಿ ಬೆಲ್ಲಾ**
**ಗಂಗಳ ಚರಿಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ**
**ಹಾಳಾಗಿ ಹೋಯಿತು ಅತ್ತು ವರ್ಣಿಸಿ** ಹೇಳಲಿ ನಾನೆಷ್ಟಾ

ಅಥವಾ

ಸಿಕ್ಕದ್ದು **ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ**
**ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು**
**ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು**
**ಕುರ್ತುಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ** ಜನಕಾ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಆಧರಿಸಿ ಸಾರಾಂಶವನ್ನು ಬರೆಯಿರಿ.**
**1 * 4 = 4**

| | |
|---|---|
| ಮೌಲ್ಯವನ್ನು ಗುರುತಿಸುವುದು | 1. ಅಂಕ |
| ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ | 3. ಅಂಕಗಳು |
| ಒಟ್ಟು | 4. ಅಂಕಗಳು |

40. ಕಲುಷಿತವಾದೀ ನದೀ ಜಲಗಳಿಗೆ
ಮುಂಗಾರಿನ ಮಳೆಯಾಗೋಣ.
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

**ಕವಿ ಜಿ. ಎಸ್. ಶಿವರುದ್ರಪ್ಪ** ಅವರು "ಮಾನವನು ತನ್ನ ಜೀವನದಲ್ಲಿ ಎಷ್ಟೇ ಅಡ್ಡಿಆತಂಕಗಳು ಎದುರಾದರು ಧನಾತ್ಮಕ ಮನೋಭಾವನೆಯಿಂದ ಹಾಗೂ ದೃಢಸಂಕಲ್ಪದಿಂದ ಕಾರ್ಯಶೀಲನಾದರೆ ಅಸಾಧ್ಯವಾದುದು ಯಾವುದು ಇಲ್ಲ" ಎಂಬುದನ್ನು ಅವರ **'ಎದೆ ತುಂಬಿ ಹಾಡಿದೆನು'** ಕವನಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಪದ್ಯದಲ್ಲಿ ಬಹಳ ಸರಳವಾಗಿ, ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ.
ಈ ನೆಲದ ಕೆರೆ, ನದಿಗಳ ನೀರಿನಲ್ಲಿ ಅನೇಕ ರೀತಿಯ ಕೊಳಕು ತುಂಬಿಕೊಂಡು ಕಲುಷಿತಗೊಂಡಿದೆ. ಮಳೆಗಾಲ ಆರಂಭವಾಗಿ ಕೊಳಕಿನ ಹಳೆನೀರು ಕೊಚ್ಚಿ ಹೋಗಿ ಹೊಸನೀರು ತುಂಬುತ್ತದೆ. ಅಂಥ ಮುಂಗಾರು ಮಳೆಯಂತೆ ನಾವೂ ಸ್ವಚ್ಛತೆಗಾಗಿ ಕ್ರಿಯಾಶೀಲರಾಗೋಣ. ಬೆಟ್ಟ ಕಾಡುಗಳು ನಾಶವಾಗಲು, ಭೂಮಿ ಬರಡಾಗಲು ನಾವೇ

ಕಾರಣರಾಗುತ್ತಿರುವ ಈ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಮರಗಿಡಬಳ್ಳಿಗಳು ನವಚೈತನ್ಯವನ್ನು ಪಡೆಯಲು ವಸಂತ ಸಮೃದ್ಧಿಯನ್ನು ಮುಟ್ಟುವ ಸಂಕಲ್ಪ ತೊಡಬೇಕೆಂದು ಕವಿ ಆಶಿಸುತ್ತಾರೆ. **ನಮ್ಮ ಪರಿಸರವನ್ನು ಶುದ್ಧವಾಗಿಟ್ಟುಕೊಂಡು ಕಾಡುಮೇಡುಗಳನ್ನು ಸಮೃದ್ಧಗೊಳಿಸಬೇಕೆಂಬ ಮೌಲ್ಯಯುತ ಸಂದೇಶವನ್ನು ಪ್ರಸ್ತುತ ಪದ್ಯವು ತಿಳಿಸುತ್ತದೆ.**

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 * 4 = 8**

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **4 ಅಂಕಗಳು** |

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಕ್ರಿ. ಶ. 1902 ರಿಂದ ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ಪಡೆದ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ಇವರು ಕ್ರಿ. ಶ. 1907 ರಲ್ಲಿ 'ನ್ಯಾಯ ವಿಧಾಯಕ ಸಭೆ'ಯನ್ನು ಸ್ಥಾಪಿಸಿದರು. ಇದು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ವಿಮರ್ಶಿಸುವ ಅಧಿಕಾರವನ್ನು ಹೊಂದಿತ್ತು. ಕ್ರಿ. ಶ. 1923 ರಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇವರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ಇವರ ಕಾಲದಲ್ಲಿ ಗ್ರಾಮ ನಿರ್ಮಲೀಕರಣ, ವೈದ್ಯ ಸಹಾಯ, ವಿದ್ಯಾಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಸಾಮಾಜಿಕ ಕಾನೂನುಗಳ ಹರಿಕಾರ ಎಂಬ ಬಿರುದಿಗೆ ಪಾತ್ರರಾದ ಇವರು ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ಬೆಂಗಳೂರಿನಲ್ಲಿ 'ಕನ್ನಡ ಸಾಹಿತ್ಯ ಪರಿಷತ್' ಎಂಬ ಸಂಸ್ಥೆಯು ಪ್ರಾರಂಭಗೊಳ್ಳಲು ಕಾರಣಕರ್ತರಾದರು. ಮೈಸೂರು ರಾಜ್ಯದಲ್ಲಿ ರೈಲು ಮಾರ್ಗಗಳ ನಿರ್ಮಾಣ ಕಾರ್ಯವು ಭರದಿಂದ ಸಾಗಿತು. ಕ್ರಿ. ಶ. 1900ರಲ್ಲಿ ಶಿವನಸಮುದ್ರದ ಬಳಿಯ ಕಾವೇರಿ ಕಣಿವೆಯಲ್ಲಿ ಏಷ್ಯಾದ ಮೊಟ್ಟ ಮೊದಲ ವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭ ಮಾಡಿದರು. ವಾಣಿವಿಲಾಸ ಸಾಗರ ಹಾಗೂ ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣ ಮಾಡಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದರು. ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ವಾಗಿ ಮಾರ್ಪಾಡಾಯಿತು.

ಅಥವಾ

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದರು. ಕ್ರಿ.ಶ. 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರೌಢಶಿಕ್ಷಣ ಶಾಲೆಗಳನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ಜಾರಿಗೆ ತಂದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ದೂರದೃಷ್ಟಿಯ ಮತ್ತೊಂದು ಫಲಶ್ರುತಿ. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಮಹಿಳಾ ಶಿಕ್ಷಣದ ಬಗ್ಗೆ ಸಹಾನುಭೂತಿ ಹೊಂದಿದ್ದ ಇವರು ಗೃಹಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿ ವೇತನವನ್ನು ಕೊಡುವ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು.

42. ಶ್ರೀ ಕೃಷ್ಣನು ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸಿ, ಒಡ್ಡಿದ ಆಮಿಷಗಳೇನು? ವಿವರಿಸಿ.

"ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಕಲಿಭೀಮ, ಅರ್ಜುನರು ಜನಿಸಿದರು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ

ಸಹದೇವರು ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶವು ಮರುಮಾತನಾಡದೆ ಸೇವೆಯನ್ನು ಮಾಡುವುವು. ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ? ಎಡಭಾಗದಲ್ಲಿ ಕೌರವೇಂದ್ರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ ಮಾಗಧ ಯಾದವಾದಿಗಳು, ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆಯುವುದು ಸರಿಯೇ? ದುರ್ಯೋಧನ ನುಡಿಸಲು 'ಒಡೆಯ ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ?" ಎಂದು ಆಮಿಷ ಒಡ್ಡಿದನು.

ಅಥವಾ

ಪಾಂಡವರು ಸೋದರರೆಂದು ತಿಳಿಸಿ, ಆಮಿಷ ಒಡ್ಡಿದ ಶ್ರೀಕೃಷ್ಣನಿಗೆ ಕರ್ಣನ ಪ್ರತ್ಯುತ್ತರ ಏನೆಂಬುದನ್ನು ವಿವರಿಸಿ.

ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕರ್ಣನು ದುಃಖಿಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು, ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ' ಎಂದುಕೊಂಡನು. "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ, ವೀರ ದುರ್ಯೋಧನನೇ ಒಡೆಯನು, ಆತನ ಹಗೆಯೆ ಹಗೆ, ಅಭಿಮಾನವೇ ಅಭಿಮಾನವು, ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತೇನೆ" ಎಂದನು. "ಕೃಷ್ಣ ಕೇಳು, ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು. ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**
**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**

43. ಪ್ರಾಗ್ಜ್ಯೋತಿಷನಾದ ಭಗದತ್ತನು ಸುಪ್ರತೀಕವೆಂಬ ಆನೆಯೊಂದಿಗೆ ಭೀಮನನ್ನು ಎದುರುಗೊಂಡನು. ಈ ಆನೆಯನ್ನು ಮಣಿಸಲು ಭೀಮನಿಂದಲೂ ಸಾಧ್ಯವಿಲ್ಲ. ಇದನ್ನು ಮಣಿಸುವುದು ಕೃಷ್ಣಾರ್ಜುನರಿಗೆ ಮಾತ್ರ ಗೊತ್ತು. ಇಂದ್ರನ ಸಖನಾದ ಭಗದತ್ತನು ಪುರುಷಶ್ರೇಷ್ಠನೆಂದೂ ಪ್ರಸಿದ್ಧನು. ಇಂದು ಆತನನ್ನು ಸೋಲಿಸಲೇ ಬೇಕೆಂದು ಪಣತೊಟ್ಟು ಕೃಷ್ಣಾರ್ಜುನರು ಮುಂದೆ ಹೋಗುವಷ್ಟರಲ್ಲಿ ತ್ರಿಗರ್ತರು ಅರ್ಜುನನ್ನು ಎದುರುಗೊಂಡು ಕಾದಾಡಲು ಪ್ರಾರಂಭಿಸಿದರು. ಸುಶರ್ಮನು ಅವನ ಸಹೋದರರು ಅರ್ಜುನನ ಮೇಲೆರಗಿ ಬಂದರು. ಅರ್ಜುನನು ಇನ್ನಿಲ್ಲದಂತೆ ಹೋರಾಡಿ, ಅವರನ್ನು ಸೋಲಿಸಿ, ಅವರ ಸೈನ್ಯವನ್ನು ದಿಕ್ಕಾಪಾಲಾಗಿ ಚದುರಿಸಿದನು. ಕೃಷ್ಣ ಆಜ್ಞೆಯಂತೆ ಅರ್ಜುನನು ತಂದೆಯನ್ನು ಸ್ಮರಿಸಿ, ವಜ್ರಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಲು ಸುಶರ್ಮನು ರಥದಲ್ಲಿಯೇ ಮೂರ್ಛಿತನಾದನು. ಇದನ್ನು ಕಂಡ ಕೃಷ್ಣನು "ಅರ್ಜುನ, ಇಂದು ಬಹಳ ಚೆನ್ನಾಗಿ ಕಾದಾಡಿದೆ. ತ್ರಿಗರ್ತರನ್ನು ಏಕಾಂಗಿಯಾಗಿ ಸೋಲಿಸಿದೆ. ಭಗದತ್ತ ಮತ್ತು ಅವನ ಆನೆಯನ್ನು ಮಣಿಸಿದೆ. ನಿನ್ನಂತಹ ಧನುರ್ಧಾರಿಯನ್ನು ನೋಡಿ ನನಗೆ ಹೆಮ್ಮೆ ಎನಿಸಿದೆ" ಎಂದನು. ಯುದ್ಧದ ಸಂದರ್ಭದಲ್ಲಿ ಭಗದತ್ತನು ಪ್ರಯೋಗಿಸಿದ ವೈಷ್ಣವಾಸ್ತ್ರವು ಭಗದತ್ತನಿಗೆ ದೊರಕಿದ ಸಂದರ್ಭವನ್ನು ಕೃಷ್ಣನು ಯುದ್ಧಭೂಮಿಯಲ್ಲಿ ಅರ್ಜುನನಿಗೆ ಹೀಗೆ ತಿಳಿಸುತ್ತಾನೆ. "ಒಂದು ಸಲ ಯಾವುದೋ ಕೆಟ್ಟ ಗಳಿಗೆಯಲ್ಲಿ ನಾನು ಈ ಅಸ್ತ್ರವನ್ನು ನರಕಾಸುರನ ತಾಯಿಯಾದ ಪೃಥ್ವಿಗೆ ಕೊಟ್ಟೆನು. ಯಾವ ಆಯುಧದಿಂದಲೂ ತನ್ನ ಮಗನಿಗೆ ಸಾವು ಸಂಭವಿಸಬಾರದೆಂಬ ಆಸೆಯಿಂದ ಅವಳು ಅದನ್ನು ತನ್ನ ಮಗನಿಗೆ ಕೊಟ್ಟಳು. ನರಕಾಸುರನು ಅದನ್ನು ಭಗದತ್ತನಿಗೆ ಕೊಟ್ಟನು. ಅದು ಯಾರ ಮೇಲೆ ಪ್ರಯೋಗವಾದಗಲೂ ಅವರನ್ನು ಅದು ಕೊಲ್ಲದೇ ಬಿಡುತ್ತಿರಲಿಲ್ಲ. ಈಗ ನನ್ನ ಅಸ್ತ್ರವು ನನ್ನ ಬಳಿಗೆ ಬಂದು ನನ್ನನ್ನು ಸೇರಿದೆ.

**ಪ್ರಶ್ನೆಗಳು :**

43. ಅ) ವೈಷ್ಣವಾಸ್ತ್ರವು ಭಗದತ್ತನಿಗೆ ಹೇಗೆ ದೊರಕಿತು?
ಯುದ್ಧದ ಸಂದರ್ಭದಲ್ಲಿ ಭಗದತ್ತನು ಪ್ರಯೋಗಿಸಿದ ವೈಷ್ಣವಾಸ್ತ್ರವು ಭಗದತ್ತನಿಗೆ ದೊರಕಿದ ಬಗೆಯನ್ನು ಕುರಿತು ಕೃಷ್ಣನು "ಒಂದು ಸಲ ಯಾವುದೋ ಕೆಟ್ಟ ಗಳಿಗೆಯಲ್ಲಿ ನಾನು ಈ ಅಸ್ತ್ರವನ್ನು ನರಕಾಸುರನ ತಾಯಿಯಾದ ಪೃಥ್ವಿಗೆ ಕೊಟ್ಟೆನು. ಯಾವ ಆಯುಧದಿಂದಲೂ ತನ್ನ ಮಗನಿಗೆ ಸಾವು ಸಂಭವಿಸಬಾರದೆಂಬ ಆಸೆಯಿಂದ ಅವಳು ಅದನ್ನು ತನ್ನ ಮಗನಿಗೆ ಕೊಟ್ಟಳು. ನರಕಾಸುರನು ಅದನ್ನು ಭಗದತ್ತನಿಗೆ ಕೊಟ್ಟನು" ಎಂದು ಅರ್ಜುನನಿಗೆ ತಿಳಿಸುತ್ತಾನೆ.

43. ಬ) ಕೃಷ್ಣನು ಅರ್ಜುನನ್ನು ನಿನ್ನಂತಹ ಧರ್ನುಧಾರಿಯನ್ನು ನೋಡಿ ಹೆಮ್ಮೆ ಎನಿಸಿದೆ ಎನ್ನಲು ಕಾರಣವೇನು?
ತ್ರಿಗರ್ತರು ಅರ್ಜುನನ್ನು ಎದುರುಗೊಂಡು ಕಾದಾಡಲು ಪ್ರಾರಂಭಿಸಿದರು. ಸುಶರ್ಮನು ಅವನ ಸಹೋದರರು ಅರ್ಜುನನ ಮೇಲೆರಗಿ ಬಂದರು. ಅರ್ಜುನನು ಇನ್ನಿಲ್ಲದಂತೆ ಹೋರಾಡಿ, ಅವರನ್ನು ಸೋಲಿಸಿ, ಅವರ ಸೈನ್ಯವನ್ನು ದಿಕ್ಕಾಪಾಲಾಗಿ ಚದುರಿಸಿದನು. ಕೃಷ್ಣ ಆಜ್ಞೆಯಂತೆ ಅರ್ಜುನನು ತಂದೆಯನ್ನು ಸ್ಮರಿಸಿ, ವಜ್ರಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಲು ಸುಶರ್ಮನು ರಥದಲ್ಲಿಯೇ ಮೂರ್ಛಿತನಾದನು. ಇದನ್ನು ಕಂಡ ಕೃಷ್ಣನು "ಅರ್ಜುನ, ಇಂದು ಬಹಳ ಚೆನ್ನಾಗಿ ಕಾದಾಡಿದೆ. ತ್ರಿಗರ್ತರನ್ನು ಏಕಾಂಗಿಯಾಗಿ ಸೋಲಿಸಿದೆ. ಭಗದತ್ತ ಮತ್ತು ಅವನ ಆನೆಯನ್ನು ಮಣಿಸಿದೆ. ನಿನ್ನಂತಹ ಧನುರ್ಧಾರಿಯನ್ನು ನೋಡಿ ನನಗೆ ಹೆಮ್ಮೆ ಎನಿಸಿದೆ" ಎಂದನು.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ. 1 * 5 = 5**

| | |
|---|---|
| **ಇಂದ, ಗೆ, ಸಂಬೋಧನೆ, ವಿಷಯ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **2 ಅಂಕಗಳು** |
| **ಮುಕ್ತಾಯ, ಇಂತಿ, ಸ್ಥಳ, ದಿನಾಂಕ** | **1 ಅಂಕ** |
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **5 ಅಂಕಗಳು** |

**ಅಥವಾ**

| | |
|---|---|
| **ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **2 ಅಂಕಗಳು** |
| **ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ** | **1 ಅಂಕ** |
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **5 ಅಂಕಗಳು** |

44. ನಿಮ್ಮನ್ನು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಜಗದೀಶ' ಭಾವಿಸಿಕೊಂಡು, ನಿಮ್ಮ ಶಾಲೆಯ ಆವರಣದಲ್ಲಿ ನೆಡಲು ಉಚಿತವಾಗಿ ಸಸಿಗಳನ್ನು ನೀಡುವಂತೆ ಕೋರಿ ನಿಮ್ಮ ಜಿಲ್ಲೆಯ ವಲಯ ಅರಣ್ಯಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ.

ಇಂದ

ಜಗದೀಶ,
10 ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಬೆಟ್ಟದಪುರ,
ಪಿರಿಯಾಪಟ್ಟಣ ತಾಲೂಕು,
ಮೈಸೂರು ಜಿಲ್ಲೆ.

ದಿನಾಂಕ : 23–09–2019
ಸ್ಥಳ : ಬೆಟ್ಟದಪುರ

ಇವರಿಗೆ

ಮಾನ್ಯ ವಲಯ ಅರಣ್ಯಾಧಿಕಾರಿಗಳು,
ಕರ್ನಾಟಕ ರಾಜ್ಯ ಅರಣ್ಯ ಇಲಾಖೆ,
ಮೈಸೂರು ಜಿಲ್ಲೆ, ಮೈಸೂರು.

ಮಾನ್ಯರೇ

ವಿಷಯ : ಶಾಲೆಯ ಆವರಣದಲ್ಲಿ ನೆಡಲು ಉಚಿತವಾಗಿ ಸಸಿಗಳನ್ನು ನೀಡುವಂತೆ ಕೋರಿ ಮನವಿ.

ನಮ್ಮ ಶಾಲೆಯಲ್ಲಿ ರಚಿಸಿರುವ 'ಹಸಿರು ಪಡೆ' ಸದಸ್ಯನಾದ ನಾನು ಪರಿಸರ ಸಂರಕ್ಷಣೆಯ ಉದ್ದೇಶದಿಂದ ಶಾಲೆಯ ಆವರಣದಲ್ಲಿ ಮರಗಿಡಗಳನ್ನು ಬೆಳೆಯಿಸಿ, ಹಸುರೀಕರಣ ಮಾಡಬೇಕೆಂಬ ಅಭಿಲಾಷೆಯನ್ನು ಹೊಂದಿರುತ್ತೇನೆ. ನಮ್ಮ ಶಾಲೆಯ ಆವರಣದಲ್ಲಿ ಬಹಳ ಜಾಗ ಇರುತ್ತದೆ. ಇದರ ಸದುಪಯೋಗ ಪಡೆದು ಉತ್ತಮವಾದ ಉದ್ಯಾನವನವನ್ನು ನಿರ್ಮಿಸಬೇಕೆಂಬುದು ನನ್ನ ಬಯಕೆ. ನಿಮ್ಮ ಅರಣ್ಯ ಇಲಾಖೆಯ ವತಿಯಿಂದ ಉಚಿತವಾಗಿ ಸಸಿಗಳನ್ನು ವಿತರಣೆ ಮಾಡುತ್ತಿರುವ ವಿಷಯವು ನನ್ನ ಗಮನಕ್ಕೆ ಬಂದಿದೆ. ತಾವು ನಮ್ಮ ಶಾಲೆಗೆ ಉಚಿತವಾಗಿ ಸಸಿಗಳನ್ನು ನೀಡಿದರೆ ಅದನ್ನು ತೆಗೆದುಕೊಂಡು ಬಂದು, ಶಾಲೆಯ ಆವರಣದಲ್ಲಿ ನೆಟ್ಟು, ಬೆಳೆಯಿಸಲು ನನ್ನ 'ಹಸುರು ಪಡೆ'ಯ ಗೆಳೆಯರು ಒಪ್ಪಿರುತ್ತಾರೆ. ಆದ್ದರಿಂದ ದಯವಿಟ್ಟು ನಮ್ಮ ಶಾಲೆಯ ಆವರಣದಲ್ಲಿ ನೆಡಲು ಉಚಿತವಾಗಿ ಸಸಿಗಳನ್ನು ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಹೃತ್ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದ ನಂಬಿರುತ್ತೇನೆ.

ವಂದನೆಗಳೊಡನೆ.

ತಮ್ಮ ನಂಬುಗೆಯ
ಸಹಿ/–
(ಜಗದೀಶ)

ಹೊರ ವಿಳಾಸ

| ಇಂದ | ಇವರಿಗೆ |
|---|---|
| ಜಗದೀಶ,<br>10 ನೆಯ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ಬೆಟ್ಟದಪುರ, ಪಿರಿಯಾಪಟ್ಟಣ ತಾಲೂಕು,<br>ಮೈಸೂರು ಜಿಲ್ಲೆ. | ಮಾನ್ಯ ವಲಯ ಅರಣ್ಯಾಧಿಕಾರಿಗಳು,<br>ಕರ್ನಾಟಕ ರಾಜ್ಯ ಅರಣ್ಯ ಇಲಾಖೆ,<br>ಮೈಸೂರು ಜಿಲ್ಲೆ,<br>ಮೈಸೂರು. |

ಅಥವಾ

ನಿಮ್ಮನ್ನು ತುಮಕೂರಿನ ಸಿದ್ಧಗಂಗಾ ಮಠದ ವಸತಿ ಶಾಲೆಯ ವಿದ್ಯಾರ್ಥಿನಿ 'ಜಯಲಕ್ಷ್ಮಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ ಪೋಷಕರ ಸಭೆಯಲ್ಲಿ ಭಾಗವಹಿಸುವಂತೆ ವಿನಂತಿಸಿ, ಕನಕಪುರದಲ್ಲಿರುವ ವಾಸವಿರುವ 'ಶಾರದಮ್ಮ' ಎಂಬ ಹೆಸರಿನ ತಾಯಿ ಅವರಿಗೆ ಪತ್ರ ಬರೆಯಿರಿ.

ಕ್ಷೇಮ ಶ್ರೀ

ಜಯಲಕ್ಷ್ಮಿ
ಹತ್ತನೆಯ ತರಗತಿ
ಸಿದ್ಧಗಂಗಾ ಮಠದ ವಸತಿ ಶಾಲೆ
ತುಮಕೂರು
ದಿನಾಂಕ : 23–09–2019

ಪ್ರೀತಿಯ ಮಾತೃಶ್ರೀ ಅವರಿಗೆ ನಿಮ್ಮ ಪ್ರೀತಿಯ ಮಗಳಾದ ಜಯಲಕ್ಷ್ಮಿಯು ಮಾಡುವ ಶಿರಸಾಷ್ಟಾಂಗ ಸಮಸ್ಕಾರಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

ನಾನು ಈ ಬಾರಿಯ ಎಸ್. ಎಸ್. ಎಲ್. ಸಿ. ಸಾರ್ವತ್ರಿಕ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣವಾಗಬೇಕೆಂಬ ಆಸೆಯಿಂದ ಬಹು ಆಸಕ್ತಿಯಿಂದ ಪ್ರತಿನಿತ್ಯ ಬೆಳಿಗ್ಗೆ ಬೇಗನೆ ಎದ್ದು ವ್ಯಾಸಂಗವನ್ನು ಮಾಡುತ್ತಿದ್ದೇನೆ. ನಿಮ್ಮೆಲ್ಲರ ಬಯಕೆಯಂತೆ ನಾನು ಖಂಡಿತ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗುತ್ತೇನೆ ಎಂಬ ನಂಬಿಕೆ ನನಗಿದೆ. ದಿನಾಂಕ 05–10–2019 ರಂದು ನಮ್ಮ ಶಾಲೆಯಲ್ಲಿ ಹತ್ತನೆಯ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪೋಷಕರ ಸಭೆಯನ್ನು ನಮ್ಮ ಶಾಲೆಯ ಮುಖ್ಯ ಶಿಕ್ಷಕರು ಕರೆದಿರುತ್ತಾರೆ. ಆದ್ದರಿಂದ ತಾವು ಅಂದು ಈ ಸಭೆಗೆ ತಪ್ಪದೇ ಹಾಜರಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮನೆಯಲ್ಲಿರುವ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ. ಎಲ್ಲಾ ವಿಷಯಕ್ಕೂ ಈ ಪತ್ರ ಕಂಡಕೂಡಲೆ ಮರುಪತ್ರವನ್ನು ಬರೆಯಿರಿ. ಈ ಪತ್ರದಲ್ಲಿ ತಪ್ಪುಗಳಿದ್ದರೆ ದಯವಿಟ್ಟು ಕ್ಷಮಿಸಿ ಮತ್ತು ನನ್ನ ತಪ್ಪುಗಳನ್ನು ತಿದ್ದಿರಿ.

ವಂದನೆಗಳೊಡನೆ

ನಿಮ್ಮ ಪ್ರೀತಿಯ ಮಗಳು

ಸಹಿ/–

(ಜಯಲಕ್ಷ್ಮಿ)

ಹೊರ ವಿಳಾಸ

| ಇಂದ | ಇವರಿಗೆ |
|---|---|
| ಜಯಲಕ್ಷ್ಮಿ<br>10 ನೆಯ ತರಗತಿ,<br>ಸಿದ್ಧಗಂಗಾ ಮಠದ ವಸತಿ ಶಾಲೆ,<br>ತುಮಕೂರು. | ಶ್ರೀಮತಿ ಶಾರದಮ್ಮ<br>ಕನಕಪುರ,<br>ರಾಮನಗರ ಜಿಲ್ಲೆ. |

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

**1 * 5 = 5**

| | |
|---|---|
| **ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ** | **1 ಅಂಕ** |
| **ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ** | **2 ಅಂಕಗಳು** |
| **ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ** | **1 ಅಂಕ** |
| **ಭಾಷಾ ಶೈಲಿ, ಪದಬಂಧ** | **1 ಅಂಕ** |
| **ಒಟ್ಟು** | **5 ಅಂಕಗಳು** |

45. **ಅಂತರ್ಜಲ ಮರುಪೂರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು.**

**ಪೀಠಿಕೆ :** ಸಕಲ ಜೀವಿಗಳಿಗೆ ನೀರೇ ಆಧಾರ. ನೀರಿಲ್ಲದ ಬದುಕನ್ನು ಊಹಿಸಲೂ ಅಸಾಧ್ಯ. ನೀರು ನಮ್ಮ ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ. ನೀರನ್ನು ಹೊಂದಿರುವುದರಿಂದಲೇ ಭೂಮಿಯು ಒಂದು ವಿಶೇಷ ಗ್ರಹ ಎನಿಸಿದೆ. ಈ ಕಾರಣಗಳಿಂದಲೇ ನೀರನ್ನು 'ಜೀವಜಲ' ಎಂದು ಕರೆಯುತ್ತೇವೆ. ಈ ಹಿನ್ನೆಲೆಯಲ್ಲಿ ಹಿಂದೆಂದಿಗಿಂತಲೂ ನೀರಿನ ಸಂರಕ್ಷಣೆ ಹಾಗೂ ಮಿತಬಳಕೆ ಇಂದಿನ ಅಗತ್ಯವಾಗಿದೆ. ನೀರಿನ ಸಂರಕ್ಷಣೆ, ಮಿತಬಳಕೆ ಹಾಗೂ ಪುನರ್ಬಳಕೆ ವಿಧಾನಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯವೇ ಜಲಸಾಕ್ಷರತೆ. ಅಂತರ್ಜಲ ಮರುಪೂರಣ ನೀರಿನ ಸಂರಕ್ಷಣೆಯಲ್ಲಿ ಮಹತ್ತ್ವದ ಪಾತ್ರವನ್ನು ವಹಿಸುತ್ತದೆ.

**ವಿಷಯ ನಿರೂಪಣೆ :** ಅರಣ್ಯನಾಶ, ಗಣಿಗಾರಿಕೆ, ನಗರೀಕರಣ ಹಾಗೂ ಇತ್ತೀಚಿನ ದಿನಗಳಲ್ಲಿ ಪ್ರಕೃತಿಯ ವೈಪರೀತ್ಯಗಳಿಂದಾಗಿ ಮಳೆ ಕಡಿಮೆಯಾಗುತ್ತಿದೆ. ಅಲ್ಲದೆ ಮಿತಿಮೀರಿದ ಕೊಳವೆ ಬಾವಿಗಳ ತೋಡುವಿಕೆಯಿಂದ ಭೂಮಿಯ ಅಂತರ್ಜಲದ ಮಟ್ಟವು ಕುಸಿಯುತ್ತಿದೆ. ಈ ಕಾರಣಗಳಿಂದ ನೀರಿನ ಅಭಾವ ತಲೆದೋರಿದೆ. ನೀರಿನ ಪ್ರತಿ ಹನಿಯು ಅತ್ಯಮೂಲ್ಯವಾಗಿದೆ. ಮಳೆಯ ನೀರು ವ್ಯರ್ಥವಾಗಿ ಹರಿದು ಸಮುದ್ರ ಸೇರುವುದನ್ನು ತಪ್ಪಿಸಿ,

ಭೂಮಿಗೆ ಬಿದ್ದ ಮಳೆನೀರನ್ನು ಭೂಮಿಯಲ್ಲಿಯೇ ಹಿಂಗುವಂತೆ ಮಾಡುವುದೇ ಅಂತರ್ಜಲ ಮರುಪೂರಣ ವಿಧಾನ. ಆದ್ದರಿಂದ ಹೊಲಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ, ಮಳೆಯ ನೀರು ಅಲ್ಲಿಯೇ ನೀರು ನಿಂತು ಹಿಂಗುವಂತೆ ಮಾಡುವುದು. ನೀರು ಪೋಲಾಗಿ ಹರಿದು ಹೋಗದಂತೆ ಇಂಗು ಗುಂಡಿಗಳು, ತಡೆಬದುಗಳನ್ನು ನಿರ್ಮಾಣ ಮಾಡುವುದು. ಬೋರ್‌ವೆಲ್‌ಗಳ ಸುತ್ತ ಹೊಂಡವನ್ನು ನಿರ್ಮಿಸಿ, ಮಳೆಯ ನೀರು ಆ ಹೊಂಡಕ್ಕೆ ಹರಿದು ಹೋಗುವಂತೆ ಮಾಡುವುದು. ಭೂಮಿಗೆ ಬಿದ್ದ ಮಳೆನೀರು ಅಪವ್ಯಯವಾಗದಂತೆ ಭೂಮಿಯೇ ಹಿಂಗುವಂತೆ ಮಾಡುವ ವಿಧಾನವೇ 'ಮಳೆಕೊಯ್ಲು'. ಈ ವಿಧಾನವನ್ನು ಜನರು ಅನುಸರಿಸುವಂತೆ ಅರಿವು ಮೂಡಿಸುವುದು. ಇವೇ ಮೊದಲಾದ ಕ್ರಮಗಳಿಂದ ಅಂತರ್ಜಲ ಮರುಪೂರಣ ಮಾಡಬಹುದಾಗಿದೆ.

**ಉಪಸಂಹಾರ :** "ಮುಂದಿನ ದಿನಗಳಲ್ಲಿ ಯುದ್ಧವಾಗುವುದಾದರೆ ಅದು ನೀರಿಗಾಗಿ" ಎಂಬ ತಜ್ಞರ ಮಾತಿನ ಹಿನ್ನೆಲೆಯಲ್ಲಿ ನೀರನ್ನು ಉಳಿಸಿ ಸಂರಕ್ಷಿಸಬೇಕು. ಅಂತರ್ಜಲ ಮರುಪೂರಣಕ್ಕೆ ಅಗತ್ಯವಾದ ಕ್ರಮಗಳನ್ನು ಮನೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಮೈದಾನಗಳಲ್ಲಿ, ಬೋರ್‌ವೆಲ್‌ಗಳ ಬಳಿಯಲ್ಲಿ ಮಳೆಯ ನೀರು ಹರಿದು ಹೋಗದೆ ಹಿಂಗುವಂತಹ ವ್ಯವಸ್ಥೆಯನ್ನು ಮಾಡಬೇಕು. ಈ ಮೂಲಕ ಮುಂದಿನ ಪೀಳಿಗೆಯು ನೀರಿಗಾಗಿ ಹೋರಾಡದೆ ನಿರಾತಂಕವಾದ ಜೀವನ ನಡೆಸಲು ಅನುವು ಮಾಡಿಕೊಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಅಥವಾ

**ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು**

**ಪೀಠಿಕೆ :** ಆಧುನಿಕ ಶತಮಾನದ ದೊಡ್ಡ ಪೆಡಂಭೂತ ಪ್ಲಾಸ್ಟಿಕ್ ಎಂದರೆ ತಪ್ಪಾಗುವುದಿಲ್ಲ. ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಇಂದು ಪ್ಲಾಸ್ಟಿಕ್ ಬೆಳೆದು ನಿಂತಿದೆ. 'ಪಾಲಿ ಎಥಿಲಿನ್ ಅಥವಾ ಪಾಲಿಥೀನ್' ಎಂಬ ರಸಾಯನಿಕದಿಂದ ತಯಾರಾಗುವ ಪ್ಲಾಸ್ಟಿಕ್ ಆಧುನಿಕ ಯುಗದ ಅಸುರನಾಗಿ ಬೆಳೆದು ನಿಂತಿದೆ. ಅಂಕಿ ಅಂಶಗಳ ಪ್ರಕಾರ ವಿಶ್ವದಾದ್ಯಂತ ಪ್ರತಿದಿನ ಸರಾಸಿ 12 ಕೋಟಿ ಟನ್ ಪ್ಲಾಸ್ಟಿಕನ್ನು ಬಳಸಲಾಗುತ್ತಿದೆ. ಭಾರತದಲ್ಲಿ ಪ್ರತಿನಿತ್ಯ ಸರಾಸರಿ 22 ಲಕ್ಷ ಟನ್ ಪ್ಲಾಸ್ಟಿಕನ್ನು ಉಪಯೋಗಿಸಲಾಗುತ್ತಿದೆ. ಒಟ್ಟಿನಲ್ಲಿ ಪ್ಲಾಸ್ಟಿಕ್ ಇಲ್ಲದೆ ನಮ್ಮ ಜೀವನ ರಥ ಮುಂದೆ ಹೋಗುವುದಿಲ್ಲ ಎಂಬ ಹಂತಕ್ಕೆ ಬಂದು ನಿಂತಿದ್ದೇವೆ.

**ವಿಷಯ ನಿರೂಪಣೆ :** ಪ್ಲಾಸ್ಟಿಕ್ ಎಷ್ಟು ಉಪಕಾರಿಯೋ ಅಷ್ಟೇ ಹಾನಿಕಾರಕ ವಸ್ತುವಾಗಿದೆ. ಒಂದು ಪ್ಲಾಸ್ಟಿಕ್ ಬ್ಯಾಗ್ ಕೊಳೆಯಲು ಸುಮಾರು ನೂರಾರು ವರ್ಷಗಳು ಬೇಕಾಗುತ್ತದೆ. ಆದ್ದರಿಂದ ಪ್ಲಾಸ್ಟಿಕ್ ಘನತ್ಯಾಜ್ಯವನ್ನು ನಿರ್ವಹಣೆ ಮಾಡುವುದು ಬಹಳ ಕಷ್ಟಕರವಾದ ಕಾರ್ಯವಾಗಿದೆ. ಪ್ಲಾಸ್ಟಿಕ್ ಅದರ ಜೀವಿತಾವಧಿಯ ಉದ್ದಕ್ಕೂ ಪಾದರಸ, ಸೀಸ, ಕ್ಯಾಡ್ಮಿಮ್, ಕ್ಲೋರಿನ್, ತವರ ಮೊದಲಾದ ವಿಷಕಾರಕ ವಸ್ತುಗಳನ್ನು ಹೊರಸೂಸುತ್ತದೆ. ಪ್ಲಾಸ್ಟಿಕ್ ಬಹುಕಾಲ ಭೂಮಿಯ ಮೇಲೆ ಬಿದ್ದಿರುವುದರಿಂದ ನಿಸರ್ಗದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ. ಮಳೆಯಿಂದ ಭೂಮಿಗೆ ಬಿದ್ದ ನೀರು ಭೂಮಿಯಲ್ಲಿ ಹಿಂಗುವುದಿಲ್ಲವಾದರಿಂದ ಅಂತರ್ಜಲದ ಮಟ್ಟ ಕುಸಿಯುತ್ತದೆ. ಪ್ಲಾಸ್ಟಿಕ್‌ತ್ಯಾಜ್ಯಗಳು ಚರಂಡಿಗಳಲ್ಲಿ ಮತ್ತು ರಾಜಕಾಲುವೆಗಳಲ್ಲಿ ಸಂಗ್ರಹಗೊಂಡು, ಮಳೆಯ ನೀರು ಸರಾಗವಾಗಿ ಹರಿದು ಹೋಗದಂತೆ ತಡೆದು, ನಗರ ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿಯನ್ನುಂಟು ಮಾಡಿ, ಜನರ ಬದುಕನ್ನು ನರಕಸದೃಶ್ಯವನ್ನಾಗಿ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಪ್ಲಾಸ್ಟಿಕ್‌ನಲ್ಲಿರುವ 'ಡೈಯಾಕ್ಸಿನ್' ಎಂಬ ರಾಸಾಯನಿಕ ಕ್ಯಾನ್ಸರ್‌ನಂತಹ ಮಾರಕ ರೋಗಕ್ಕೆ ಕಾರಣವಾಗತ್ತದೆ. ಬಿಸಿ ಪದಾರ್ಥಗಳನ್ನು ಪ್ಲಾಸ್ಟಿಕ್ ಡಬ್ಬಿಗಳಲ್ಲಿ ಹಾಕಿದಾಗ ಅದರಲ್ಲಿನ ಪ್ಲಾಸ್ಟಿಸೈಸರ್ ರಾಸಾಯನಿಕ ಕರಗಿ ನಮ್ಮ ರಕ್ತನಾಳಕ್ಕೆ ಸುಲಭವಾಗಿ ಸೇರಿಕೊಳ್ಳುತ್ತದೆ. ಇದರಿಂದ ಕಣ್ಣು ಕುರುಡಾಗುವ ಸಾಧ್ಯತೆಯೂ ಸಹ ಇರುತ್ತದೆ. ಪ್ಲಾಸ್ಟಿಕ್ ವಸ್ತುಗಳ ತ್ಯಾಜ್ಯವನ್ನು ದನಕರುಗಳು ತಿನ್ನುವುದರಿಂದ ಅವುಗಳ ಕರುಳಿನಲ್ಲಿ ಅದು ಶೇಖರಣೆಗೊಂಡು ಅವು ಸಾಯುತ್ತವೆ. 5 ಮಿಲಿಮೀಟರಗಳಿಗಿಂತಲೂ ಕಡಿಮೆ ದಪ್ಪ ಇರುವ ಮೈಕ್ರೋಪ್ಲಾಸ್ಟಿಕ್ ವಾತಾವರಣದಲ್ಲಿ ಬೆರೆತು, ಸಣ್ಣಸಣ್ಣ ರಾಸಾಯನಿಕ ಕಣಗಳಾಗಿ ಬದಲಾಗುತ್ತದೆ. ವಾತಾವರಣದಲ್ಲಿನ ಈ ಪ್ಲಾಸ್ಟಿಕ್ ಕಣಗಳು ಮಾನವನ ಮತ್ತು ಪ್ರಾಣಿಗಳ ದೇಹಕ್ಕೆ ಸೇರುವುದರಿಂದ ಕರುಳು, ರಕ್ತನಾಳ, ಶ್ವಾಸಕೋಶ ಮತ್ತು ಪಿತ್ತಕೋಶಗಳು ಬಹುಬೇಗ ಹಾನಿಗೊಳಗಾಗುತ್ತವೆ. ಪ್ಲಾಸ್ಟಿಕ್ ಬಾಟಲಿಗಳಿಂದ ಬಿಡುಗಡೆಯಾಗುವ ಕಾರ್ಬನ್ ಡೈ ಆಕ್ಸೈಡ್ ಮತ್ತು ವಿಷಕಾರಿ ರಸಾಯನಿಕಗಳು ಭೂಮಿಯ ತಾಪಮಾನವನ್ನು ಹೆಚ್ಚಿಸುತ್ತವೆ. ಇವೇ ಮೊದಲಾದ ದುಷ್ಪರಿಣಾಮಗಳು ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುತ್ತವೆ.

**ಉಪಸಂಹಾರ :** ಪ್ಲಾಸ್ಟಿಕ್‌ನಿಂದಾಗುವ ದುಷ್ಪರಿಣಾಮಗಳನ್ನು ಮನಗಂಡು ಸರ್ಕಾರ 40 ಮೈಕ್ರಾನ್‌ಗಳಿಗಿಂತಲೂ ಜಾಸ್ತಿಯಿರುವ ತೆಳು ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದೆಯಾದರೂ ಅದರ ಬಳಕೆ ನಿಂತಿಲ್ಲ. ಜನರು ಜಾಗೃತರಾಗಿ ಪ್ಲಾಸ್ಟಿಕ್‌ನಿಂದ ಉಂಟಾಗುವ ದುಷ್ಪರಿಣಾಮಗಳನ್ನು ಅರಿತು, ಬಳಕೆ ಮಾಡುವುದನ್ನು ನಿಲ್ಲಿಸಬೇಕು.

ಭಾರತದಾದ್ಯಂತ ಹಂತಹಂತವಾಗಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧ ಮಾಡಬೇಕು. ಕಾನೂನು ಮೀರಿ ಪ್ಲಾಸ್ಟಿಕ್ ಬಳಸುವವರ ಮೇಲೆ ಕಾನೂನು ರೀತ್ಯ ಕ್ರಮಕೈಗೊಳ್ಳಬೇಕು. ಜನರು ಪ್ಲಾಸ್ಟಿಕ್ ವಸ್ತುಗಳನ್ನು ಬಳಸುವುದನ್ನು ನಿಲ್ಲಿಸುವ ಮೂಲಕ ಪರಿಸರ ಸಂರಕ್ಷಣೆ ಮಾಡಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

---- 0 ----

ಹಂತ : 8. ಪ್ರಶ್ನಾನುಸಾರ ವಿಶ್ಲೇಷಣೆ.

| ಮುಖ್ಯ ಪ್ರಶ್ನೆ ಸಂಖ್ಯೆ | ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|---|
| I | 1 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| | 2 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| | 3 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| | 4 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| | 5 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| | 6 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| II | 7 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| | 8 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| | 9 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| | 10 | ವ್ಯಾಕರಣಾಂಶ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| III | 11 | ಯುದ್ಧ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| | 12 | ಯುದ್ಧ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| | 13 | ಲಂಡನ್ ನಗರ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| | 14 | ಭಾಗ್ಯಶಿಲ್ಪಿಗಳು | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| | 15 | ಸಂಕಲ್ಪಗೀತೆ | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| | 16 | ಹಕ್ಕಿ ಹಾರುತಿದೆ ನೋಡಿದಿರಾ? | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| | 17 | ಸ್ವಾಮಿ ವಿವೇಕಾನಂದರ ಚಿಂತನೆಗಳು | ಸ್ಮರಣೆ | ಸ್ಮರಿಸಿ ಉತ್ತರಿಸುವುದು | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| IV | 18 | ಯುದ್ಧ | ಗ್ರಹಿಕೆ | ವಿವರಿಸುವುದು. | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| | 19 | ಶಬರಿ | ಗ್ರಹಿಕೆ | ವಿವರಿಸುವುದು | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| | 20 | ಶಬರಿ | ಗ್ರಹಿಕೆ | ವಿವರಿಸುವುದು. | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| | 21 | ಭಾಗ್ಯಶಿಲ್ಪಿಗಳು | ಗ್ರಹಿಕೆ | ವಿವರಿಸುವುದು | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| | 22 | ಕೌರವೇಂದ್ರನ ಕೊಂದೆ ನೀನು | ಗ್ರಹಿಕೆ | ವಿವರಿಸುವುದು. | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| | 23 | ಕೌರವೇಂದ್ರನ ಕೊಂದೆ ನೀನು | ಗ್ರಹಿಕೆ | ವಿವರಿಸುವುದು | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| | 24 | ಸ್ವಾಮಿ ವಿವೇಕಾನಂದರ ಚಿಂತನೆಗಳು | ಗ್ರಹಿಕೆ | ವಿವರಿಸುವುದು | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |

| ಮುಖ್ಯ ಪ್ರಶ್ನೆ ಸಂಖ್ಯೆ | ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|---|
| | 25 | ಸ್ವಾಮಿ ವಿವೇಕಾನಂದರ ಚಿಂತನೆಗಳು | ಗ್ರಹಿಕೆ | ವಿವರಿಸುವುದು. | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| | 26 | ವಸಂತ ಮುಖ ತೋರಲಿಲ್ಲ | ಗ್ರಹಿಕೆ | ವಿವರಿಸುವುದು | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| | 27 | ವಸಂತ ಮುಖ ತೋರಲಿಲ್ಲ | ಗ್ರಹಿಕೆ | ವಿವರಿಸುವುದು | ಕಿರು ಉತ್ತರ 2 | 2 | ಸಾಧಾರಣ | 3 ನಿಮಿಷಗಳು |
| V | 28 | ಲಂಡನ್ ನಗರ | ಗ್ರಹಿಕೆ | ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| | 29 | ಹಕ್ಕಿ ಹಾರುತಿದೆ ನೋಡಿದಿರಾ? | ಗ್ರಹಿಕೆ | ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| VI | 30 | ಛಂದಸ್ಸು | ಗ್ರಹಿಕೆ | ಪ್ರಸ್ತಾರ ಹಾಕುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| VII | 31 | ಅಲಂಕಾರ | ಗ್ರಹಿಕೆ | ಸಮನ್ವಯಗೊಳಿಸುವುದು | ದೀರ್ಘ ಉತ್ತರ 1 | 3 | ಕಠಿಣ | 4 ನಿಮಿಷಗಳು |
| VIII | 32 | ಗಾದೆ ವಿಸ್ತರಿಸಿ ಬರೆಯುವುದು | ಗ್ರಹಿಕೆ | ವಿಸ್ತರಿಸಿ ಬರೆಯುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| IX | 33 | ಯುದ್ಧ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| | 34 | ಶಬರಿ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| | 35 | ಲಂಡನ್ ನಗರ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| | 36 | ಸಂಕಲ್ಪಗೀತೆ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| | 37 | ಹಕ್ಕಿ ಹಾರುತಿದೆ ನೋಡಿದಿರಾ? | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| | 38 | ಹಲಗಲಿಯ ಬೇಡರು | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುವುದು | ದೀರ್ಘ ಉತ್ತರ 1 | 3 | ಸಾಧಾರಣ | 4 ನಿಮಿಷಗಳು |
| X | 39 | ಹಲಗಲಿಯ ಬೇಡರು | ಸ್ಮರಣೆ | ಪದ್ಯವನ್ನು ಪೂರ್ಣಗೊಳಿಸುವುದು | ದೀರ್ಘ ಉತ್ತರ 2 | 4 | ಸುಲಭ | 5 ನಿಮಿಷಗಳು |
| XI | 40 | ಸಂಕಲ್ಪಗೀತೆ | ಪ್ರಸಂಶೆ | ಸಾರಾಂಶವನ್ನು ಬರೆಯುವುದು | ದೀರ್ಘ ಉತ್ತರ 2 | 4 | ಕಠಿಣ | 8 ನಿಮಿಷಗಳು |
| XII | 41 | ಭಾಗ್ಯಶಿಲ್ಪಿಗಳು | ಅಭಿವ್ಯಕ್ತಿ | ಸ್ವಂತವಾಕ್ಯಗಳಲ್ಲಿ ವಿವರಿಸುವುದು | ದೀರ್ಘ ಉತ್ತರ 2 | 4 | ಕಠಿಣ | 8 ನಿಮಿಷಗಳು |
| | 42 | ಕೌರವೇಂದ್ರನ ಕೊಂದೆ ನೀನು | ಅಭಿವ್ಯಕ್ತಿ | ಸ್ವಂತವಾಕ್ಯಗಳಲ್ಲಿ ವಿವರಿಸುವುದು | ದೀರ್ಘ ಉತ್ತರ 2 | 4 | ಕಠಿಣ | 8 ನಿಮಿಷಗಳು |
| XIII | 43 | ಅಪಠಿತ ಗದ್ಯ | ಗ್ರಹಿಕೆ | ವಿವರಿಸುವುದು | ದೀರ್ಘ ಉತ್ತರ 2 | 4 | ಸುಲಭ | 8 ನಿಮಿಷಗಳು |
| XIV | 44 | ಪತ್ರಲೇಖನ | ಅಭಿವ್ಯಕ್ತಿ | ಸ್ವಂತವಾಕ್ಯಗಳಲ್ಲಿ ವಿವರಿಸುವುದು | ದೀರ್ಘ ಉತ್ತರ 3 | 5 | ಸುಲಭ | 10 ನಿಮಿಷಗಳು |
| XV | 45 | ಪ್ರಬಂಧ ಲೇಖನ | ಅಭಿವ್ಯಕ್ತಿ | ಸ್ವಂತವಾಕ್ಯಗಳಲ್ಲಿ ವಿವರಿಸುವುದು | ದೀರ್ಘ ಉತ್ತರ 3 | 5 | ಕಠಿಣ | 10 ನಿಮಿಷಗಳು |
| | | ಒಟ್ಟು | | | | 100 | | 165 + 15 ನಿಮಿಷಗಳು |